ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿತ್ರದುರ್ಗ ಇವರು ಚಳ್ಳಕೆರೆ ತಾಲ್ಲೂಕು, ನಾಯಕನಹಟ್ಟಿ ಹೋಬಳಿ, ಮಲ್ಲೂರಹಳ್ಳಿ ಗ್ರಾಮದ ರಿ.ಸ.ನಂ. 122ರಲ್ಲಿ 4–00 ಹೆಕ್ಟೇರ್ ಸಿ ಮತ್ತು ಡಿ ಪ್ರದೇಶವು ಅರಣ್ಯ ಪ್ರದೇಶಕ್ಕೆ ಸೇರಿರುವುದಿಲ್ಲ. ಹಾಗೂ ಸೆಕ್ಷನ್–4 ಪ್ರದೇಶವಾಗಲೀ, ಡೀಮ್ಡ್ ಫಾರೆಸ್ಟ್‌ಗೆ ಸೇರಿದ ಪ್ರದೇಶವಾಗಲಿ ಆಗಿರುವುದಿಲ್ಲ. ಸದರಿ ಸ.ನಂ. ನಲ್ಲಿ ಈಗಾಗಲೇ 33–00 ಎಕರೆ ಪ್ರದೇಶದಲ್ಲಿ ನೆಡುತೋಪು ಬೆಳಸಲಾಗಿದ್ದು, ಅದಕ್ಕೆ ಹೊಂದಿಕೊಂಡಂತೆ 10–00 ಎಕರೆ ಪ್ರದೇಶವಿದ್ದು, ಪರಿಹಾರಾತ್ಮಕ ನೆಡುತೋಪು ಬೆಳೆಸಲು ಯೋಗ್ಯವಾಗಿರುತ್ತದೆ ಮತ್ತು ಪರಿಹಾರಾತ್ಮಕ ನೆಡುತೋಪು ಬೆಳೆಸಲು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಕ್ರಮಕೈಗೊಳ್ಳಬಹುದಾಗಿದೆ ಎಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 52, ಎಲ್‌ಜಿಸಿ 2015, ಬೆಂಗಳೂರು, ದಿನಾಂಕ : 21–06–2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ನಾಯಕನಹಟ್ಟಿ ಹೋಬಳಿ, ಮಲ್ಲೂರಹಳ್ಳಿ ಗ್ರಾಮದ ರಿ.ಸ.ನಂ. 122ರಲ್ಲಿ ವಿಸ್ತೀರ್ಣ 4–00 ಹೆಕ್ಟೇರ್ ಜಮೀನನ್ನು ಶ್ರೀ ಎಸ್.ವಿ. ಶ್ರೀನಿವಾಸುಲು, ಮೈನ್ಸ್ ಓನರ್, ಹೊಸಪೇಟೆ ಇವರ ಪರವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಈ ಕೆಳಕಂಡ ಷರತ್ತುಗಳೊಂದಿಗೆ ಅರಣ್ಯ ಇಲಾಖೆಗೆ ವರ್ಗಾಯಿಸಲು ಸರ್ಕಾರದ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಷರತ್ತುಗಳು :

1. ವರ್ಗಾವಣೆಯಾದ ಜಮೀನನ್ನು ಸರ್ಕಾರದ ಸುತ್ತೋಲೆ ಸಂಖ್ಯೆ : ಆರ್‌ಡಿ 27, ಎಲ್‌ಜಿಪಿ 2011, ದಿನಾಂಕ : 06–04–2011ರ ಕಂಡಿಕೆ–6ರಂತೆ ಕ್ರಮವಹಿಸುವುದು.
2. ವರ್ಗಾವಣೆ ಪಡೆದ ಇಲಾಖೆಗೆ ವರ್ಗಾಯಿಸಿದ ಜಮೀನಿನ ಅವಶ್ಯಕತೆ ಇಲ್ಲದೇ ಇದ್ದಲ್ಲಿ ಮರಳಿ ಕಂದಾಯ ಇಲಾಖೆಗೆ ವಾಪಸ್ಸು ಮಾಡತಕ್ಕದ್ದು.
3. ವರ್ಗಾವಣೆಯಾದ ಜಮೀನನ್ನು ಅರಣ್ಯ ಇಲಾಖೆಯು ನೆಡುತೋಪು ಬೆಳೆಸುವ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.

P.R. 479
SC-25

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರೇವಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ–3).

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ನಂದಗುಡಿ ಗ್ರಾಮದ ಸ.ನಂ. 294ರಲ್ಲಿ 1–20 ಎಕರೆ/ಗುಂಟೆ ಸರ್ಕಾರಿ ಗೋಮಾಳ ಜಮೀನನ್ನು ಉಚಿತವಾಗಿ ಮಾಜಿ ಸೈನಿಕರಾದ ಶ್ರೀ ಆರ್.ಆನಂದರ್ ರವರಿಗೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಪತ್ರ ಸಂಖ್ಯೆ : ಎಲ್ಎನ್‌ಡಿ(ಹೊ) ಸಿಆರ್: 09/2011-12, ದಿನಾಂಕ : 20-05-2015.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 20-05-2015ರ ಪತ್ರದಲ್ಲಿ ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ನಂದಗುಡಿ ಗ್ರಾಮದ ಸ.ನಂ. 294ರಲ್ಲಿ 18-01 ಎಕರೆ/ಗುಂಟೆ ಸರ್ಕಾರಿ ಗೋಮಾಳ ಜಮೀನಿನ ಪೈಕಿ 1-20 ಎ/ಗು ಸರ್ಕಾರಿ ಗೋಮಾಳ ಜಮೀನನ್ನು ಮಾಜಿ ಸೈನಿಕರಾದ ಶ್ರೀ ಆರ್.ಆನಂದನ್ ರವರಿಗೆ ಮಂಜೂರು ಮಾಡಲು ಪ್ರಸ್ತಾಪಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ವರದಿಯಂತೆ ನಂದಗುಡಿ ಗ್ರಾಮದಲ್ಲಿ 53 ಜಾನುವಾರುಗಳಿದ್ದು, ಅವುಗಳಿಗೆ ನಿಯಮಾನುಸಾರ 16-00 ಎಕರೆ ಜಮೀನು ಸಾಕಾಗಿದ್ದು, ಪ್ರಸ್ತಾಪಿತ ನಂದಗುಡಿ ಗ್ರಾಮದ ಸ.ನಂ. 294ಕ್ಕೆ ಸಂಬಂಧಿಸಿದಂತೆ ಸ್ಥಳ ತನಿಖೆ ನಡೆಸಿದ್ದು, ಈ ಜಮೀನನ್ನು ಯಾವುದೇ ಸರ್ಕಾರದ ಉದ್ದೇಶಗಳಿಗಾಗಿ ಮೀಸಲಿಟ್ಟಿರುವುದಿಲ್ಲವೆಂದು, ಯಾವುದೇ ನಮೂನೆ 50, 53 ಅರ್ಜಿಗಳು ಬಾಕಿ ಇರುವುದಿಲ್ಲವೆಂದು ಹಾಗೂ ಯಾವುದೇ ಬೆಲೆ ಬಾಳುವ ಮರಗಿಡಗಳು ಇರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಮುಂದುವರೆದು, ಜಿಲ್ಲಾಧಿಕಾರಿಗಳ ವರದಿಯಂತೆ ಅರ್ಜಿದಾರರಾದ ಶ್ರೀ ಆರ್. ಆನಂದನ್ ಇವರು ಮಾಜಿ ಸೈನಿಕರು ಎಂಬುದಕ್ಕೆ ಗುರುತಿನ ಚೀಟಿ ಒದಗಿಸಿರುತ್ತಾರೆಂದು ಹಾಗೂ ಇವರು 1971ರ ಇಂಡೋ-ಪಾಕ್ ಅಂತರ್ ಯುದ್ಧದ ಸಮಯದಲ್ಲಿ ಬಾಂಬ್ ಬ್ಲಾಸ್ಟಿನಿಂದ ಎರಡು ಕಾಲು ಮತ್ತು ಪಾದಗಳಿಗೆ ಅಂಗವಿಕಲತೆಯಾಗಿದೆಯೆಂದು ತಿಳಿಸುತ್ತಾ, ಸಂಬಂಧಿಸಿದ ಪ್ರಾಧಿಕಾರ ನೀಡಿದ ಪ್ರಮಾಣಪತ್ರಗಳನ್ನು ಒದಗಿಸಿರುತ್ತಾರೆಂದು ಸದರಿಯವರ ವಾರ್ಷಿಕ ಆದಾಯವು ₹. 2,80,000/- ಇರುವುದಾಗಿ ಆದಾಯ ಪ್ರಮಾಣ ಪತ್ರ ಒದಗಿಸಿರುತ್ತಾರೆ. ಕರ್ನಾಟಕ ಭೂಮಂಜೂರಾತಿ ನಿಯಮಗಳು, 1969ರ ನಿಯಮ 4(1) ರನ್ವಯ ಆದಾಗ್ಯೂ ಅಂತಹ ವರಮಾನದ ಮಿತಿಯನ್ನು ಸೇನಾ ಕಾರ್ಯಾಚರಣೆಯಲ್ಲಿ ಅಂಗವೈಕಲ್ಯಕ್ಕೆ ತುತ್ತಾದ ಯೋಧರ ವಿಷಯದಲ್ಲಿ ಅನುಸರಿಸುವಂತಿಲ್ಲವೆಂದು ತಿಳಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 227, ಎಲ್‌ಜಿಬಿ 2015, ಬೆಂಗಳೂರು, ದಿನಾಂಕ : 22-06-2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ವಿಷಯದ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ನಂದಗುಡಿ ಗ್ರಾಮದ ಸ.ನಂ. 294 ರಲ್ಲಿ 1-20 ಎಕರೆ/ಗುಂಟೆ ಸರ್ಕಾರಿ ಗೋಮಾಳ ಜಮೀನನ್ನು ಕೃಷಿ ಉದ್ದೇಶಕ್ಕಾಗಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 97(4) ರನ್ವಯ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಮಾಜಿ ಸೈನಿಕರಾದ ಶ್ರೀ ಆರ್. ಆನಂದನ್ ಇವರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 12(5) ರನ್ವಯ ಉಚಿತವಾಗಿ ಹಾಗೂ ನಿಯಮ 4(1) ರನ್ವಯ ವರಮಾನಕ್ಕೆ ಸಂಬಂಧಿಸಿದ ನಿಯಮಗಳನ್ನು ಸಡಿಲಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

1. ಮಂಜೂರಾದ ಜಮೀನನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು.
2. ಸದರಿ ಜಮೀನನ್ನು ಎರಡು ವರ್ಷಗಳ ಅವಧಿಯೊಳಗೆ ಉಪಯೋಗಿಸತಕ್ಕದ್ದು.

P.R. 480

SC-50

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎಲ್. ಮಹಾಂತೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ-1).

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಸಿ.ಆ.ಸು. ಇಲಾಖೆಯಲ್ಲಿ ಮುಖ್ಯ ಜಾಗೃತ ಅಧಿಕಾರಿಯನ್ನು (Chief Vigilance Officer) ನೇಮಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 14 ಸೇಲೋಯು 2016, ದಿನಾಂಕ : 14-03-2016.
2. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 88 ಸೇಲೋಯು 2016, ದಿನಾಂಕ : 22-06-2016.

ಪ್ರಸ್ತಾವನೆ :

ಮೇಲೆ ಓದಲಾದ ಸಂಖ್ಯೆ (1)ರಲ್ಲಿ ಓದಲಾದ ದಿ : 14-03-2016ರ ಆದೇಶದನ್ವಯ, ರಾಜ್ಯದಲ್ಲಿ ಭ್ರಷ್ಟಾಚಾರ ತಡೆ ಅಧಿನಿಯಮ, 1988ನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಹಾಗೂ ಸ್ವತಂತ್ರವಾಗಿ ತನಿಖೆ ನಡೆಸಲು ಒಂದು ಪ್ರತ್ಯೇಕ ಭ್ರಷ್ಟಾಚಾರ ನಿಗ್ರಹ ದಳವನ್ನು (Anti Corruption Bureau) ಸೃಜಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿ : 22-06-2016ರ ಆದೇಶದಲ್ಲಿ, ಭ್ರಷ್ಟಾಚಾರ ನಿಗ್ರಹ ದಳವನ್ನು ಸೃಜಿಸಿ ಹೊರಡಿಸಿರುವ ದಿ : 14-03-2016ರ ಸರ್ಕಾರದ ಆದೇಶದಲ್ಲಿನ ಆದೇಶ ಭಾಗದ ಕಂಡಿಕೆ 7ರನ್ವಯ ಸರ್ಕಾರದ ಪ್ರತಿಯೊಂದು ಇಲಾಖೆ ಮತ್ತು ಇಂಜಿನಿಯರಿಂಗ್ ಇಲಾಖೆಯನ್ನೊಳಗೊಂಡಂತೆ ನಿರ್ದೇಶನಾಲಯ/ಆಯುಕ್ತಾಲಯ, ಕ್ಷೇತ್ರ ಇಲಾಖೆ, ಸಾರ್ವಜನಿಕ ಉದ್ದಿಮೆಗಳು, ಸರ್ಕಾರದಿಂದ ಸ್ಥಾಪಿತವಾದ ನಿಗಮ/ಮಂಡಳಿಗಳು ಮತ್ತು ವಿಧಾನ ಮಂಡಲದ ಅಧಿನಿಯಮದಡಿ ಸ್ಥಾಪಿತವಾಗಿರುವ ಸ್ಥಳೀಯ ಸಂಸ್ಥೆಗಳು ಹಾಗು ಎಲ್ಲಾ ಶಾಸನಬದ್ಧ ಸಂಸ್ಥೆಗಳಲ್ಲಿ ಜಾಗೃತ ಕೋಶಗಳನ್ನು ಚಾಲನೆಗೊಳಿಸುವ ನಿಟ್ಟಿನಲ್ಲಿ ಕಾರ್ಯವಿಧಾನ/ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ದಿ : 22-06-2016ರ ಆದೇಶದ ಆದೇಶ ಭಾಗದ ಕಂಡಿಕೆ 1(1)ರಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದ ಎಲ್ಲಾ ಇಲಾಖೆಗಳಲ್ಲಿ ಒಂದು ಜಾಗೃತ ಕೋಶ ಇರತಕ್ಕದ್ದೆಂದೂ ಹಾಗೂ ಆಯಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳ

ನಂತರದ (officer next in seniority) ಅಧಿಕಾರಿಯನ್ನು ಸದರಿ ಜಾಗೃತ ಕೋಶದ ಮುಖ್ಯ ಜಾಗೃತ ಅಧಿಕಾರಿ (Chief Vigilance Officer) ಯನ್ನಾಗಿ ನೇಮಿಸಲು ಆದೇಶಿಸಲಾಗಿರುತ್ತದೆ.

ಅದರಂತೆ ಪರಿಶೀಲಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ :. ಸಿಆಸುಇ 169 ಸೇಲೋಯು 2016, ಬೆಂಗಳೂರು, ದಿನಾಂಕ : 12-07-2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸಂಬಂಧಿಸಿದಂತೆ, **'ಸರ್ಕಾರದ ಉಪ ಕಾರ್ಯದರ್ಶಿ' ಸಿ.ಆ.ಸು. ಇಲಾಖೆ (ಸೇವೆಗಳು)'** ಇವರನ್ನು ಮುಖ್ಯ ಜಾಗೃತ ಅಧಿಕಾರಿಯನ್ನಾಗಿ (Chief Vigilance Officer) ನೇಮಿಸಿ ಆದೇಶಿಸಲಾಗಿದೆ.

P.R. 481

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಉಮಾ ಕೆ.
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಜಾಗೃತ ವಿಭಾಗ).

ಶಿಕ್ಷಣ ಸಚಿವಾಲಯ

ವಿಷಯ : 2016-17ನೇ ಶೈಕ್ಷಣಿಕ ಸಾಲಿನಿಂದ "Outcome Based Education" ಆಧಾರಿತ ಪರಿಷ್ಕೃತ 3ನೇ ಮತ್ತು 4ನೇ ಸೆಮಿಸ್ಟರ್ ಡಿಪ್ಲೋಮೊ ಪಠ್ಯಕ್ರಮವನ್ನು ರಾಜ್ಯದ ಪಾಲಿಟೆಕ್ನಿಕ್‌ಗಳಲ್ಲಿ ಅಳವಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಪತ್ರ ಸಂಖ್ಯೆ : ಇಡಿ 281 ಟಿಪಿಇ 2013, ದಿನಾಂಕ : 13-02-2015.
2. ಸರ್ಕಾರದ ಆದೇಶ ಸಂಖ್ಯೆ : ಇಡಿ 148 ಟಿಪಿಇ 2015, ದಿನಾಂಕ : 23-06-2016.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ : ತಾಂಶಿನಿ 33 ಸಿಡಿಸಿ (1) 2015-16, ದಿನಾಂಕ : 20-05-2016.

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರದ ಪತ್ರದಲ್ಲಿ ರಾಜ್ಯದ ಪಾಲಿಟೆಕ್ನಿಕ್‌ಗಳ ಡಿಪ್ಲೋಮೊ ಕೋರ್ಸುಗಳ ಪಠ್ಯಕ್ರಮವನ್ನು ಕೆಲವೊಂದು ಷರತ್ತುಗೊಳಪಡಿಸಿ ಪರಿಷ್ಕರಿಸಲು ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ. ಮೇಲೆ ಓದಲಾದ ಕ್ರ.ಸಂ. (2)ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ನ ಡಿಪ್ಲೋಮೊ ಕೋರ್ಸುಗಳ 1ನೇ ಮತ್ತು 2ನೇ ಸೆಮಿಸ್ಟರ್‌ನ ಪಠ್ಯಕ್ರಮವನ್ನು 2015-16ನೇ ಶೈಕ್ಷಣಿಕ ಸಾಲಿನಿಂದ ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (3)ರ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರದಲ್ಲಿ ಈಗಾಗಲೇ ರಾಜ್ಯ ಸರ್ಕಾರವು 2015-16ನೇ ಶೈಕ್ಷಣಿಕ ಸಾಲಿನಿಂದ ಪಠ್ಯಕ್ರಮವನ್ನು ಪರಿಷ್ಕರಿಸಲು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ಪಠ್ಯಕ್ರಮವನ್ನು ಪರಿಷ್ಕರಿಸುವ ಬಗ್ಗೆ ವಿವಿಧ ತಾಂತ್ರಿಕ ಶಿಕ್ಷಣ ಪರಿಣಿತರು, ರಾಷ್ಟ್ರ ಹಾಗೂ ರಾಜ್ಯದ ವಿವಿಧ ಔದ್ಯೋಗಿಕ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಪರಿಣಿತರು ಹಾಗೂ ಕೈಗಾರಿಕಾ ಪರಿಣಿತರಿಂದ ಪ್ರಸಕ್ತ ಕೈಗಾರಿಕಾ ಕ್ಷೇತ್ರದ ಅವಶ್ಯಕತೆಗಳಿಗೆ ಅನುಗುಣವಾಗಿ ಸದರಿಯವರುಗಳ ಅಭಿಪ್ರಾಯ/ಅನಿಸಿಕೆಗಳನ್ವಯ ರಾಜ್ಯದ ಪಾಲಿಟೆಕ್ನಿಕ್‌ಗಳ 3ನೇ ಮತ್ತು 4ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಪರಿಷ್ಕರಿಸಿದ್ದು, ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಕನ್ನಡ ಪಠ್ಯ ವಿಷಯಗಳನ್ನು ಕಡ್ಡಾಯವಾಗಿ ಅಭ್ಯಾಸ ಮಾಡಲು ಸರ್ಕಾರದ ಆದೇಶ ಸಂಖ್ಯೆ : ಇಡಿ 17 ಡಿಟಿಇ 2015, ದಿನಾಂಕ : 30-09-2015ರಲ್ಲಿ ಹಾಗೂ ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ರವರು ತಿಳಿಸಿರುವಂತೆ ಕರ್ನಾಟಕ ಸರ್ಕಾರ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ಸೂಚಿಸಿದ ಹಿನ್ನೆಲೆಯಲ್ಲಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಇತರೆ ಸಂಸ್ಥೆಗಳ ಕನ್ನಡ ವಿಷಯ ಪರಿಣಿತರನ್ನೊಳಗೊಂಡ ಸಮಿತಿಯಿಂದ ಕನ್ನಡ-1 (3ನೇ ಸೆಮಿಸ್ಟರ್ ಡಿಪ್ಲೋಮೊ) ಹಾಗೂ ಕನ್ನಡ-2 (4ನೇ ಸೆಮಿಸ್ಟರ್ ಡಿಪ್ಲೋಮೊ) ಪಠ್ಯಕ್ರಮವನ್ನು ರಚಿಸಲಾಗಿರುವುದನ್ನು 2016-17ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಪಾಲಿಟೆಕ್ನಿಕ್ ಡಿಪ್ಲೋಮೊ ಪ್ರೋಗ್ರಾಂನಲ್ಲಿ ಅಳವಡಿಸಿಕೊಳ್ಳಲು ಸರ್ಕಾರದ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಡಿ 76 ಟಿಪಿಇ 2016, ಬೆಂಗಳೂರು, ದಿನಾಂಕ : 21ನೇ ಜೂನ್ 2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ನ ಡಿಪ್ಲೋಮೊ ಕೋರ್ಸುಗಳ 3ನೇ ಮತ್ತು 4ನೇ ಸೆಮಿಸ್ಟರ್‌ನ ಪಠ್ಯಕ್ರಮವನ್ನು 2016-17ನೇ ಶೈಕ್ಷಣಿಕ ಸಾಲಿನಿಂದ ಪರಿಷ್ಕರಿಸಿ ಆದೇಶಿಸಲಾಗಿದೆ ಮತ್ತು ಈ ಸಂಬಂಧದ ಕೆಳಕಂಡ ರೂಪರೇಷೆಗಳನ್ನು ಪಾಲಿಸುವಂತೆ ತಿಳಿಸಲಾಗಿದೆ.

1. ಹತ್ತನೇ ತರಗತಿಯಲ್ಲಿ ಕನ್ನಡವನ್ನು ವಿಷಯವನ್ನಾಗಿ ಅಭ್ಯಾಸ ಮಾಡಿಲ್ಲದಿದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಕನ್ನಡ ಬಾರದ ವಿದ್ಯಾರ್ಥಿ ಎಂದು ಪರಿಗಣಿಸಿ ಅಂತಹ ವಿದ್ಯಾರ್ಥಿಗಳಿಗೆ 3ನೇ ಸೆಮಿಸ್ಟರ್‌ನಲ್ಲಿ ಕನ್ನಡ ಕಲಿ-1 ಮತ್ತು 4ನೇ ಸೆಮಿಸ್ಟರ್‌ನಲ್ಲಿ ಕನ್ನಡ ಕಲಿ-2 ಪಠ್ಯಕ್ರಮವನ್ನು ಕಡ್ಡಾಯವಾಗಿ ಅಭ್ಯಸಿಸಬೇಕಾಗಿರುತ್ತದೆ.
2. ಹತ್ತನೇ ತರಗತಿಯಲ್ಲಿ ಕನ್ನಡವನ್ನು ವಿಷಯವನ್ನಾಗಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ 3ನೇ ಸೆಮಿಸ್ಟರ್‌ನಲ್ಲಿ ತಾಂತ್ರಿಕ ಕನ್ನಡ-1 ಮತ್ತು 4ನೇ ಸೆಮಿಸ್ಟರ್‌ನಲ್ಲಿ ತಾಂತ್ರಿಕ ಕನ್ನಡ-2 ಪಠ್ಯಕ್ರಮವನ್ನು ಕಡ್ಡಾಯವಾಗಿ ಅಭ್ಯಸಿಸಬೇಕಾಗಿರುತ್ತದೆ.
3. ಕನ್ನಡ ಬಲ್ಲ/ಕನ್ನಡ ಬಾರದ ವಿದ್ಯಾರ್ಥಿಗಳ ಕನ್ನಡ ವಿಷಯಗಳ ಬೋಧನಾ ಕ್ರಮಗಳು, ಪರೀಕ್ಷೆಗಳು, ಮೌಲ್ಯಮಾಪನ ಕ್ರಮ ಹಾಗೂ ತೇರ್ಗಡೆಯ ಅರ್ಹತೆಗಳನ್ನು ಪಠ್ಯಕ್ರಮಗಳಲ್ಲಿ ನಿಗಧಿಪಡಿಸಿರುವಂತೆ ಅನುಸರಿಸುವುದು.

4. ಡಿಪ್ಲೋಮೊ ಪ್ರಮಾಣ ಪತ್ರ ಪಡೆಯಲು ನಿಗಧಿತ ಕನ್ನಡ ಪಠ್ಯದಲ್ಲಿ ತೇರ್ಗಡೆ ಹೊಂದುವುದು ಕಡ್ಡಾಯವಾಗಿರುತ್ತದೆ. ವ್ಯಾಸಂಗದ ಅವಧಿಯಲ್ಲಿ ಕನ್ನಡ ವಿಷಯದಲ್ಲಿ ಅನುತ್ತೀರ್ಣರಾದರೂ ಮುಂದಿನ ತರಗತಿಗಳಿಗೆ ಪ್ರವೇಶಾತಿಯನ್ನು ನೀಡುವುದು.

P.R. 482

SC-50

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ವೆಂಕಟೇಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ರಾಜ್ಯದ ನೇಕಾರರ ಶ್ರೇಯೋಭಿವೃದ್ಧಿಗಾಗಿ ಸಲಹಾ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ :
1. 2014–15ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ 3ನೇ ವರದಿ ದಿನಾಂಕ : 21–07–2015.
2. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ : ಕೈಜಇ/ಜವಳಿ/ಜತ.3/ಬಿಸಿ&ಎಂ/ಎಸ್.ಸಿ.ಪಿ–ಟಿಎಸ್‌ಪಿ/2014–15–16/100, ದಿನಾಂಕ : 25–05–2016.

ಪ್ರಸ್ತಾವನೆ :

ಮೇಲೆ ಓದಲಾದ (1)ರ ವರದಿಯ ಕ್ರಮ ಸಂಖ್ಯೆ : 7ರಲ್ಲಿ ರಾಜ್ಯದಲ್ಲಿ ಪ್ರತಿ ವರ್ಷ ನೇಕಾರರ ಶ್ರೇಯೋಭಿವೃದ್ಧಿಗಾಗಿ ಸರ್ಕಾರದಿಂದ ಗುರುತಿಸಲಾಗಿರುವ ಯೋಜನೆಗಳು, ಇವುಗಳ ಅನುಷ್ಠಾನ ಹಾಗೂ ಸಾಧಿಸಿರುವ ಪ್ರಗತಿ ಇತ್ಯಾದಿಗಳ ಪರಿಶೀಲನೆಗಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಆರ್ಥಿಕ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಜವಳಿ ಇಲಾಖೆಯ ಕಾರ್ಯದರ್ಶಿ ಹಾಗೂ ಜವಳಿ ಆಯುಕ್ತರನ್ನೊಳಗೊಂಡ ಸಮಿತಿಯನ್ನು ಪುನರ್ ರಚಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಜವಳಿ ಅಭಿವೃದ್ಧಿ ಆಯುಕ್ತರು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಶಿಫಾರಸ್ಸಿನ ಮೇರೆಗೆ ರಾಜ್ಯದಲ್ಲಿರುವ ನೇಕಾರರ ಶ್ರೇಯೋಭಿವೃದ್ಧಿಗಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಯೋಜನಾ ಕಾರ್ಯಕ್ರಮಗಳ ಅನುಷ್ಠಾನ ಕುರಿತಂತೆ ಪರಿಶೀಲನೆಯನ್ನು ನಡೆಸಲು ಉನ್ನತ ಮಟ್ಟದ ಅಧಿಕಾರಿಗಳ ಸಮಿತಿಯನ್ನು ರಚಿಸುವಂತೆ ಕೋರಿದ್ದಾರೆ.

ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ವಾಕೈ 99 ಜಕೈಯೋ 2015, ಬೆಂಗಳೂರು, ದಿನಾಂಕ : 18–06–2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಾಜ್ಯದ ನೇಕಾರರ ಶ್ರೇಯೋಭಿವೃದ್ಧಿಗಾಗಿ ಸರ್ಕಾರದಿಂದ ಜಾರಿಗೆ ತರುವ ವಿವಿಧ ಯೋಜನೆಗಳ ಅನುಷ್ಠಾನ ಹಾಗೂ ಸಾಧಿಸಿರುವ ಪ್ರಗತಿ ಇತ್ಯಾದಿಗಳ ಪರಿಶೀಲನೆಗಾಗಿ, ಕೈಮಗ್ಗ ಮತ್ತು ವಿದ್ಯುತ್ ಮಗ್ಗ ಉದ್ದಿಮೆಯ ಪುನಶ್ಚೇತನಕ್ಕಾಗಿ ಬಂಡವಾಳ ಹೂಡಿಕೆ ಮತ್ತು ಮಾರುಕಟ್ಟೆ ಸಂಪರ್ಕಗಳ ಇತ್ಯಾದಿಗಳ ಬಗ್ಗೆ, ಜವಳಿ ಕ್ಷೇತ್ರದ ನೂತನ ವಿನ್ಯಾಸ ಹಾಗೂ ತಂತ್ರಜ್ಞಾನಗಳ ಅಳವಡಿಕೆ, ರಫ್ತು ಮಾರಾಟಕ್ಕೆ ಉತ್ತೇಜನ ಯೋಜನೆಗಳನ್ನು ತಯಾರು/ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಸಮಿತಿಯನ್ನು ರಚಿಸಲಾಗಿದೆ.

1.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಬೆಂಗಳೂರು	ಅಧ್ಯಕ್ಷರು
2.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು	ಸದಸ್ಯರು
3.	ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ	ಸದಸ್ಯರು
4.	ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆ	ಸದಸ್ಯರು
5.	ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ	ಸದಸ್ಯರು
6.	ಕಾರ್ಯದರ್ಶಿಗಳು (ವೆಚ್ಚ), ಆರ್ಥಿಕ ಇಲಾಖೆ	ಸದಸ್ಯರು
7.	ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ	ಸದಸ್ಯರು
8.	ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ	ಸದಸ್ಯರು
9.	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು	ಸದಸ್ಯರು
10.	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿ., ಬೆಂಗಳೂರು	ಸದಸ್ಯರು
11.	ವ್ಯವಸ್ಥಾಪಕ ನಿದೇಶಕರು, ಕಾವೇರಿ ಹ್ಯಾಂಡ್‌ಲೂಮ್ಸ್, ಬಸವನಗುಡಿ, ಬೆಂಗಳೂರು	ಸದಸ್ಯರು
12.	ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು	ಸದಸ್ಯ ಕಾರ್ಯದರ್ಶಿ

ಸಲಹಾ ಸಮಿತಿಯ ಕರ್ತವ್ಯಗಳು :–

1. ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಸರ್ಕಾರದ ಯೋಜನೆಗಳ ಕಾರ್ಯಕ್ರಮಗಳ ಪುನರ್ ಪರಿಶೀಲನೆ ಮತ್ತು ಮೌಲ್ಯಾಂಕನ ಮಾಡುವುದು.
2. ಚಾಲ್ತಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಯೋಜನೆಗಳಲ್ಲಿ ಇರುವ ನ್ಯೂನತೆಗಳನ್ನು ಗುರುತಿಸಿ, ಅವುಗಳನ್ನು ನಿವಾರಿಸಲು ಕೈಗೊಳ್ಳಬಹುದಾದ ಕ್ರಮಗಳನ್ನು ಸೂಚಿಸುವುದು.
3. ಹೊಸ ಬಂಡವಾಳ, ಸಾಲ ಮತ್ತು ಸಹಾಯಧನದೊಂದಿಗೆ ಹೊಸದಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಕೈಮಗ್ಗ ಉದ್ದಿಮೆ ಕ್ಷೇತ್ರವನ್ನು ಉನ್ನತೀಕರಿಸುವುದು (ಮೌಲ್ಯಾಧಾರಿತ ಕೈಮಗ್ಗ ಸಂಕೋಲೆಯನ್ನು ರೂಪಿಸುವುದು)
4. ಕೈಮಗ್ಗ ಮತ್ತು ವಿದ್ಯುತ್ ಮಗ್ಗ ಕ್ಷೇತ್ರದ ಅಭಿವೃದ್ಧಿ ಕೆಲಸಗಳಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಜವಳಿ ಮೂಲಸೌಕರ್ಯ ಅಭಿವೃದ್ಧಿ ನಿಗಮ, ಕಾವೇರಿ ಹ್ಯಾಂಡ್‌ಲೂಮ್ಸ್ (ಕರ್ನಾಟಕ ರಾಜ್ಯ ನೇಕಾರರ ಸಹಕಾರ ಸಂಘಗಳ ಮಹಾಮಂಡಳಿ ನಿಯಮಿತ) ಈ ಸಂಸ್ಥೆಗಳು ಜವಳಿ ಅಭಿವೃದ್ಧಿಗಾಗಿ ಯಾವ ರೀತಿಯ ಪಾತ್ರವನ್ನು ನಿರ್ವಹಿಸಬೇಕೆಂಬುದನ್ನು ಕಾಲಕಾಲಕ್ಕೆ ಚರ್ಚಿಸಿ ತೀರ್ಮಾನಿಸುವುದು.
5. ಜವಳಿ ಕ್ಷೇತ್ರದ ಅಭಿವೃದ್ಧಿಗಾಗಿ ಸಚಿವಾಲಯ ಒಳಗೊಂಡಂತೆ ಕೈಮಗ್ಗ ಮತ್ತು ಜವಳಿ ಇಲಾಖೆಯು ಸಕ್ರಿಯವಾಗಿ ಭಾಗವಹಿಸಲು ಸಲಹೆ ನೀಡುವುದು.
6. ಸಮಿತಿಯು ನೀಡಿರುವ ಸಲಹೆ ಸೂಚನೆಗಳ ಅನುಷ್ಠಾನದ ಬಗ್ಗೆ ಕಾಲಕಾಲಕ್ಕೆ ಸಮಿತಿ ಸಭೆ ನಡೆಸಿ, ಪ್ರಗತಿ ಪರಿಶೀಲಿಸುವುದು.
7. ಅಧ್ಯಕ್ಷರು ಸೂಚಿಸಿರುವ ಪ್ರಸ್ತಾವನೆಗಳ ಬಗ್ಗೆ ಚರ್ಚೆ.

ಈ ಆದೇಶವನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

P.R. 483

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಬೋರಲಿಂಗಯ್ಯ
ಸರ್ಕಾರದ ಉಪ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕಂದಾಯ ಸಚಿವಾಲಯ

ವಿಷಯ : ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ, 2013ರ ಅನ್ವಯ ಕಲಂ–64ರಡಿ ಸ್ವೀಕೃತವಾಗುವ ಅರ್ಜಿಗಳ ಇತ್ಯರ್ಥತೆಯ ಕಾರ್ಯನಿರ್ವಹಿಸುವಿಕೆಗಾಗಿ ಕಲಂ–51ರ ಅನ್ವಯ ಹಾಗೂ ರಾಜ್ಯ ನಿಯಮಾವಳಿಗಳು 2015ರ ನಿಯಮ 35ರ ಅನ್ವಯ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಪೂರಕ ಸಿಬ್ಬಂದಿಗಳ ಹುದ್ದೆಗಳೊಂದಿಗೆ ಪ್ರಾಧಿಕಾರಗಳನ್ನು ಸೃಜಿಸುವ ಬಗ್ಗೆ – ಆದೇಶ.

ಪ್ರಸ್ತಾವನೆ :

"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ, 2013" ದಿನಾಂಕ : 01–01–2014ರಿಂದ ಜಾರಿಗೆ ಬಂದಿರುತ್ತದೆ. ಈ ಕಾಯ್ದೆಯ ಕಲಂ–64ರಡಿ ಸ್ವೀಕೃತವಾಗುವ ಅರ್ಜಿಗಳ ಇತ್ಯರ್ಥತೆಯ ಕಾರ್ಯನಿರ್ವಹಿಸುವಿಕೆಗಾಗಿ **ಕಲಂ–51ರ ಅನ್ವಯ ಭೂಸ್ವಾಧೀನತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ** ಪ್ರಾಧಿಕಾರಗಳನ್ನು ರಚಿಸಬೇಕಾಗಿರುತ್ತದೆ.

ದಿನಾಂಕ : 18–08–2014 ರಂದು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿಯ ಅಂಶ(14)ರಲ್ಲಿ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ನಿರ್ಮಾಣಕ್ಕೆ ಸಂಬಂಧಿಸಿದ ವಿವಾದಾತ್ಮಕ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವ ಸಂಬಂಧ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಪ್ರಾಧಿಕಾರಗಳನ್ನು ರಚಿಸಲು ನಿರ್ಣಯ ಕೈಗೊಳ್ಳಲಾಗಿರುತ್ತದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುರ್ನವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಗಳು 2015ರ ನಿಯಮ 35ರ ಅನ್ವಯ ಪೂರಕ ಸಿಬ್ಬಂದಿಗಳೊಂದಿಗೆ ಪ್ರಾಧಿಕಾರಗಳನ್ನು ರಚಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಈ ಸಂಬಂಧ ರಾಜ್ಯದ ನಾಲ್ಕು ಕಂದಾಯ ವಿಭಾಗ (ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿ)ಗಳಲ್ಲಿ ತಲಾ ಒಂದರಂತೆ ನಾಲ್ಕು ಪ್ರಾಧಿಕಾರಗಳನ್ನು ರಚಿಸಿ, ಈ ಪ್ರಾಧಿಕಾರಗಳು ಸುಗಮವಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ, ಪೀಠಸೀನಾಧಿಕಾರಿ (Presiding Officer) ಮತ್ತು ರಿಜಿಸ್ಟ್ರಾರ್ ಹುದ್ದೆಯನ್ನು ಒಳಗೊಂಡಂತೆ ಇತರೆ ಪೂರಕ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಲು ನಿರ್ಧರಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ :–

ಸರ್ಕಾರದ ಆದೇಶ ಸಂಖ್ಯೆ : ಕಂಇ 05 ಆರ್‌ಇಹೆಚ್ 2014 ಬೆಂಗಳೂರು, ದಿನಾಂಕ : 11–05–2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013"**ರ ಕಲಂ–64ರಡಿ ಸ್ವೀಕೃತವಾಗುವ ಅರ್ಜಿಗಳ ಇತ್ಯರ್ಥತೆಯ ಕಾರ್ಯನಿರ್ವಹಿಸುವಿಕೆಗಾಗಿ ಕಲಂ–51ರ ಅನ್ವಯ ಹಾಗೂ ರಾಜ್ಯ ನಿಯಮಾವಳಿಗಳು 2015ರ ನಿಯಮ 35ರ ಅನ್ವಯ ಈ ತಕ್ಷಣದಿಂದ ಜಾರಿಗೆ ಬರುವಂತೆ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಪೂರಕ ಸಿಬ್ಬಂದಿಗಳ ಹುದ್ದೆಗಳೊಂದಿಗೆ ಪ್ರಾಧಿಕಾರಗಳನ್ನು ಸೃಜಿಸಲಾಗಿದೆ :–

ಕಂದಾಯ ವಿಭಾಗಗಳು

ಬೆಂಗಳೂರು/ಮೈಸೂರು/ಕಲಬುರಗಿ/ಬೆಳಗಾವಿ

ಕ್ರ.ಸಂ.	ಸೃಜಿಸಲಾದ ಹುದ್ದೆಗಳ ಪದನಾಮ ಮತ್ತು ವೇತನ ಶ್ರೇಣಿ	ಸೃಜಿಸಲಾದ ಹುದ್ದೆಗಳ ಸಂಖ್ಯೆ	ಷರಾ
1	ಪೀಠಾಸೀನಾಧಿಕಾರಿ (ಪ್ರಿಸೈಡಿಂಗ್ ಅಧಿಕಾರಿ) (ಎಫ್‌ಎನ್‌ಜೆಪಿಸಿ ವೇತನ ಶ್ರೇಣಿ)	04 ಪ್ರತಿ ವಿಭಾಗಕ್ಕೆ ಒಬ್ಬರಂತೆ	ಹಾಲಿ ಸೇವೆಯಲ್ಲಿರುವ ಜಿಲ್ಲಾ ನ್ಯಾಯಾಧೀಶರ ಶ್ರೇಣಿಯ ನ್ಯಾಯಾಧೀಶರು, (ನಿಯೋಜನೆ ಮೇರೆಗೆ ಅಥವಾ ಏಳು ವರ್ಷಕ್ಕಿಂತ ಕಡಿಮೆ ಸೇವೆ ಸಲ್ಲಿಸಿರದ ವಕೀಲರು(ಸೇವಾ ಗುತ್ತಿಗೆ)
2	ರಿಜಿಸ್ಟ್ರಾರ್ (22800–43200)	04 ಪ್ರತಿ ವಿಭಾಗಕ್ಕೆ ಒಬ್ಬರಂತೆ	ಕಂದಾಯ ಸೇವೆಯ ತಹಶೀಲ್ದಾರ್ ಗ್ರೇಡ್–2 ವೃಂದದ ಅಧಿಕಾರಿ (ನಿಯೋಜನೆ ಮೇರೆಗೆ)
3	ಶೀಘ್ರಲಿಪಿಗಾರರು (14550–26700)	04 ಪ್ರತಿ ವಿಭಾಗಕ್ಕೆ ಒಬ್ಬರಂತೆ	ಕಂದಾಯ ಸೇವೆಯ ಸಿಬ್ಬಂದಿ (ನಿಯೋಜನೆ ಮೇರೆಗೆ)
4	ಪ್ರಥಮ ದರ್ಜೆ ಸಹಾಯಕರು (14550–26700)	08 ಪ್ರತಿ ವಿಭಾಗಕ್ಕೆ ಎರಡರಂತೆ	ಕಂದಾಯ ಸೇವೆಯ ಸಿಬ್ಬಂದಿ (ನಿಯೋಜನೆ ಮೇರೆಗೆ)
5	ದ್ವಿತೀಯ ದರ್ಜೆ ಸಹಾಯಕರು (11600–21000)	16 ಪ್ರತಿ ವಿಭಾಗಕ್ಕೆ ನಾಲ್ಕು ಜನರಂತೆ	ಕಂದಾಯ ಸೇವೆಯ ಸಿಬ್ಬಂದಿ (ನಿಯೋಜನೆ ಮೇರೆಗೆ)
6	ವಾಹನ ಚಾಲಕರು	04 ಪ್ರತಿ ವಿಭಾಗಕ್ಕೆ ಒಬ್ಬರಂತೆ	ಹೊರಗುತ್ತಿಗೆ
7	ಗ್ರೂಪ್–ಡಿ	12 ಪ್ರತಿ ವಿಭಾಗಕ್ಕೆ ಮೂರರಂತೆ	ಹೊರಗುತ್ತಿಗೆ
ಒಟ್ಟು ಹುದ್ದೆಗಳು		**52**	

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 143 ವೆಚ್ಚ–7/2016, ದಿನಾಂಕ : 20–04–2016ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

P.R. 484

SC-300

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಮಹಾಲಕ್ಷ್ಮಿ
ಸರ್ಕಾರದ ಅಧೀನ ಕಾರ್ಯದರ್ಶಿ–1
ಕಂದಾಯ ಇಲಾಖೆ (ಪುನರ್ವಸತಿ ಮತ್ತು ಪುನರ್ ನಿರ್ಮಾಣ).

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಸಾಗರ ಪಟ್ಟಣದಲ್ಲಿ ಹಾಲಿ ಇರುವ 2 ಸಂಖ್ಯೆಯ ಶಿಥಿಲಾವಸ್ಥೆಯಲ್ಲಿರುವ ಮೇಲ್ಮಟ್ಟದ ಜಲಸಂಗ್ರಹಾಗಾರಗಳನ್ನು ಕೆಡವಿ ಮತ್ತು ಹೊಸದಾಗಿ 2 ಸಂಖ್ಯೆಯ ಮೇಲ್ಮಟ್ಟದ ಜಲಸಂಗ್ರಹಾಗಾರಗಳ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿ ₹. 480.00 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒಚ ಮಂಡಳಿ ರವರ ಪತ್ರ ಸಂಖ್ಯೆ : ಕಜಮಂ:ಮುಅ(ಬೆ)ಸಅ–3/ ಸಾಗರ/2255/2015–16, ದಿನಾಂಕ : 25–02–2016.

ಪ್ರಸ್ತಾವನೆ :

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರ ಪತ್ರ ದಿನಾಂಕ : 25–02–2016 ರಲ್ಲಿ ಸಾಗರ ಪಟ್ಟಣ ವ್ಯಾಪ್ತಿಯ ಜನಸಂಖ್ಯೆ 50.000 ಕ್ಕಿಂತಲೂ ಕಡಿಮೆ ಇದ್ದು, ಈಗ 1.00 ಲಕ್ಷಕ್ಕಿಂತ ಹೆಚ್ಚಾಗಿದ್ದು, ಹಾಲಿಇರುವ ಜಲಸಂಗ್ರಹಾಗಾರಗಳನ್ನು ನೆಲಸಮ ಮಾಡಿ, ಪುನರ್ ನಿರ್ಮಾಣ ಮಾಡುವುದು ತುಂಬಾ ಅನಿವಾರ್ಯವೆಂದು ತಿಳಿಸಿರುತ್ತಾರೆ. ಅದರಂತೆ, ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು **ಕಾಂಪೌಂಡ್ ವಾಲ್ ನಿರ್ಮಾಣದ ಕಾಮಗಾರಿಯನ್ನು ಹೊರತುಪಡಿಸಿ,** ಕೇವಲ ಹಾಲಿ ಇರುವ 2 ಸಂಖ್ಯೆಯ ಶಿಥಿಲಾವಸ್ಥೆಯಲ್ಲಿರುವ ಮೇಲ್ಮಟ್ಟದ ಜಲಸಂಗ್ರಹಾಗಾರಗಳನ್ನು ಕೆಡವಿ ಮತ್ತು ಹೊಸದಾಗಿ 2 ಸಂಖ್ಯೆಯ ಮೇಲ್ಮಟ್ಟದ ಜಲಸಂಗ್ರಹಾಗಾರಗಳ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿಯನ್ನು 2015–16ನೇ ಸಾಲಿನ ದರಪಟ್ಟಿಯಂತೆ ₹. 480.00 ಲಕ್ಷಗಳಿಗೆ ತಯಾರಿಸಿ ಆಡಳಿತಾತ್ಮಕ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಸದರಿ ಯೋಜನೆಯನ್ನು ರಾಜ್ಯ ಯೋಜನೆಯಲ್ಲಿ ಕೈಗೆತ್ತಿಕೊಳ್ಳಬೇಕಾಗಿರುವುದರಿಂದ, ಅಂದಾಜು ಪಟ್ಟಿಯನ್ನು 2015–16ನೇ ಸಾಲಿನ ಮಂಡಳಿ ಮತ್ತು ಲೋಕೋಪಯೋಗಿ ದರಪಟ್ಟಿಯಂತೆ ತಯಾರಿಸಲಾಗಿದ್ದು, ಅದರಂತೆ ಸಾಗರ ಪಟ್ಟಣದಲ್ಲಿ ಹಾಲಿ ಇರುವ 2 ಸಂಖ್ಯೆಯ ಶಿಥಿಲಾವಸ್ಥೆಯಲ್ಲಿರುವ ಮೇಲ್ಮಟ್ಟದ ಜಲಸಂಗ್ರಹಾಗಾರಗಳನ್ನು ಕೆಡವಿ ಮತ್ತು ಹೊಸದಾಗಿ 2 ಸಂಖ್ಯೆಯ ಮೇಲ್ಮಟ್ಟದ ಜಲಸಂಗ್ರಹಾಗಾರಗಳ ನಿರ್ಮಾಣ ಕಾಮಗಾರಿಯ ಅಂದಾಜಿನ

ಮೊತ್ತ ₹. 480.00 ಲಕ್ಷಗಳಾಗಿರುತ್ತದೆ. ಸದರಿ ಯೋಜನೆಯನ್ನು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರದಿಂದ ಅನುದಾನ (60%)	:	₹. 288.00 ಲಕ್ಷಗಳು
ಆರ್ಥಿಕ ಸಂಸ್ಥೆಯ ಸಾಲ (30%)	:	₹. 144.00 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಗೆ (10%)	:	₹. 48.00 ಲಕ್ಷಗಳು
ಒಟ್ಟು ಮೊತ್ತ	:	**₹. 480.00 ಲಕ್ಷಗಳು**

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 29 ಯುಡಬ್ಲ್ಯೂಎಸ್ 2015 ಬೆಂಗಳೂರು, ದಿನಾಂಕ : 08-06-2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಾಗರ ಪಟ್ಟಣದಲ್ಲಿ ಹಾಲಿಯಿರುವ ಎರಡು ಸಂಖ್ಯೆಯ ಶಿಥಿಲಾವಸ್ಥೆಯಲ್ಲಿರುವ ಮೇಲ್ಮಟ್ಟದ ಜಲಸಂಗ್ರಹಗಾರಗಳನ್ನು ಕೆಡವಿ ಹೊಸದಾಗಿ ಮೇಲ್ಮಟ್ಟದ ಜಲಸಂಗ್ರಹಗಾರಗಳ ನಿರ್ಮಾಣ ಕಾಮಗಾರಿಯ ₹. 480.00 ಲಕ್ಷಗಳ (ನಾಲ್ಕು ನೂರು ಎಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಅಂದಾಜು ಪಟ್ಟಿಗೆ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿವತಿಯಿಂದ ಕಾಮಗಾರಿ ಕೈಗೆತ್ತಿಕೊಳ್ಳಲು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಂಖ್ಯೆ : ಆಇ 263 ವೆ-9 2016, ದಿನಾಂಕ : 23-05-2016ರ ಅನುಮತಿಯಂತೆ ಹೊರಡಿಸಲಾಗಿದೆ.

P.R. 485 ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವೈ. ಗೋಪಾಲ್
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
ನಗರಾಭಿವೃದ್ಧಿ ಇಲಾಖೆ (ಮಂಡಳಿ).

COMMERCE AND INDUSTRIES SECRETARIAT

Subject: Standard Operating Procedure to process applications for grant of Mining Lease where Prospecting has been completed through Prospecting Licence under Section l0A (2) (b) of MMDR Act,1957-reg.

Read: (1) MMDR (amendment) Act, 2015 dated 27.03.2015.

(2) Proposal of the Commissioner, Department of Mines and Geology dated 25.02.2016

(3) Proposal of the Commissioner, Department of Mines arid Geology dated 23.02.2016

Preamble:

The Government of India has amended the Mines and Minerals (Development and Regulation) Act, 1957 and published in the Official Gazette the Mines and Minerals (Development and Regulation) Amendment Act, 2015 on 27.03.2015 w.e.f. 12.01.2015 read at (l) above.

Vide this amendment, as per Section 10A (2) (b) :

"where before the commencement of the Mines and Minerals (Development and Regulation) Amendment Act, 2015 a reconnaissance permit or prospecting licence has been granted in respect of any land for any mineral, the permit holder or the licensee shall have a right for obtaining a prospecting licence followed by a mining lease as the case may be, in respect of that mineral in that land, if the State Government is satisfied that the permit holder or the licensee, as the case may be,-

(i) has undertaken reconnaissance operations or prospecting , operations, as the case may be, to establish the existence of mineral contents in such land in accordance with such parameters as may be prescribed by the Central Government;

(ii) has not committed any breach of the terms and conditions of the reconnaissance permit or the prospecting licence;

(iii) has not become ineligible under the provisions of this Act; and .

(iv) has not failed to apply for grant of prospecting licence or mining lease, as the case may be, within a period of three months after the expiry of reconnaissance permit or prospecting licence, as the case may be, or within such further period not exceeding six months as may be extended by the State Government. "

There is no Standard Operating Procedure (SOP) to process the application for grant of mining lease (ML) wherein the applicants have completed the prospecting through the prospecting licence (PL). Such application has to be considered under Section l0A (2) (b) of the Act. A SOP needs to be prescribed in the form of checklist and procedures to be followed.

The Commissioner, Department of Mines and Geology has sent a proposal Read at (2) and (3) above, including a check list for SOP to process seamless transfer of PL to ML cases. Thereafter, the Principal Secretary, Commerce and Industries held several meetings to finalise the SOP to be issued for the cases where the applicants have applied for grant of mining lease after completing prospecting under Prospecting Licence (PL).

After consideration of the fact that there is no Standard Operating Procedure for processing seamless transfer of applications from PL to ML and based on discussions held with the Commissioner, Department of Mines and Geology along with his Officers, the

Government issues the following Standard Operating Procedure (SOP) for building up and scrutiny of the proposals that need to be considered under Section 10 A (2) (b) of the MMDR Act, 1957.

Hence, the following order :

GOVERNMENT ORDER NO. CI 30 CMC 2015, BENGALURU, DATED: 25.05.2016

The matter has been examined in the light of above mentioned facts and circumstances as detailed in the preamble and following standard operating procedure (SOP) is laid down along with attached checklist for consideration of proposals under Section 10 A (2) (b) of the MMDR Act, 1957.

1. Building up of the proposal in file with necessary documents shall be the. responsibility of the Mining Lease Section of the Department of Mines and Geology.
2. After that, for proper scrutiny at all levels the checklist attached to the Government Order shall be prepared, duly filled and followed at every level.
3. Part I of the checklist shall be duly filled up by the Mining lease section of the Department of Mines and Geology along with cross reference of necessary papers and documents in the file, as well with cross reference to other parts of the checklist, wherever necessary.
4. Part-II of the checklist shall be duly verified by the Drawing Branch of the Department of Mines and Geology with respect to the status of the applied area.
5. Part III A of the checklist shall be verified by the Indian Bureau of Mines (IBM) under various provisions of the Mineral Conservation and Development Rules, 1988, (MCDR,1988). The Mineral (Evidence of Mineral Contents) Rules, 2015 and the Government of India guidelines issued on 24.06.2009 and 30.10.2014 as well as with respect to the additional conditions, if any, imposed by the Central or the State Government.
6. A technical scrutiny of the report of IBM as well as reports submitted by the PL holder to the State Government shall be done by the Senior Geologist of the ML Section as well as the Geologist (P & M) who looks after the exploration. They will fill up Part IIIB of the checklist.
7. A Scrutiny Committee of the Department of Mines and Geology comprising of Geologist (P & M), Senior Geologist (MLS) and Senior Geologist (P&M) will verify the compliance under Section 10A(2)(b) of MMDR Act, 2015 and the comments shall be recorded in part IV of the check list.
8. All the aspects of part I to IV will be appraised by an Appraisal Committee comprising of Senior Geologist (P&M), Deputy Director (R&D) and Additional Director (Minerals) and their findings will be recorded in Part V of the checklist.
9. In the part VI of the check list the Director/Commissioner, Department of Mines and Geology shall then based on examination of checklist and recommendation of the Appraisal Committee and examination of necessary papers and document in the file, finally record his opinion on whether the application is eligible for grant of Mining Lease under Section 10A(2)(b) of MMDR Act, 1957.
10. All due diligence including examination of all papers and documents and then filling up of checklist must be completed in the Department of Mines and Geology before the proposal is sent to the Government.
11. Each page of the checklist must be signed by the concerned who are supposed to fill the checklist as indicated in this Government Order. Also, on each page of the checklist the AML File No and name of the applicant must be mentioned.
12. Government will examine the recommendation of the Appraisal Committee and that of the Director/Commissioner, Department of Mines and Geology and proceed to take decision in the matter in accordance with law with regards to eligibility of the applicant for being considered under Section 10 A (2) (b) of MMDR Act, 1957.
13. All provisions of Rule 7 of the Mineral (other than Atomic and Hydrocarbons Energy Minerals) Concession Rule, 2016 shall also be complied with for grant of Mining Lease.

By order and in the name of the Governor of Karnataka

ANVAR BASHA

Under Secretary to Government (Mines)

Commerce and Industries Department

Standardized checklist for Scrutiny of file regarding grant of ML (Under Section 10A(2)(b) of MM(DR) Amendment Act 2015) for which application has been received after completing PL

AML File No.

No. of Pages – a) Note Sheets – 1 to …..

(in the file) b) Correspondence – 1 to …..

PART – I

Scrutiny at ML Section

Sl. No.	**Items**	**Provisions of Act and Rules**	**Response**	**Page No. in File**
1	**2**	**3**	**4**	**5**
1.	Name and Correspondence address of the applicant	Form – I (as prescribed u/r 22)		
2	E-mail address of the applicant			
3	Details of Prospecting licence : (a) Application Fee paid for PL (b) Date of Approval obtained for grant of PL from GoI under section 5(1) of MMDR Act, 1957 (c) Date of Grant of Prospecting License (d) Date of Registration of PL (e) Date of Expiry of PL			
4	Date of filing application for mining lease			
4(a)	Has the application for grant of ML been filed within a period of 3 months after expiry of the PL or within such further period not exceeding six months as may have been extended by the State Government, and is the application valid.			
4(b)	Whether the applicant has furnished non refundable fee ₹ 5.00 Lakh per Square per square kilometer on pro rata basis of the area over which the mining lease applied for			
5	Mineral(s) applied for & prior approval obtained for	in Form – I and approval letter of GoI		
5(a)	Location : Sy. Nos Village Taluk District Extent in hectares DGPS co-ordinates Survey of India Topo Sheet Number	Form – I		
5(b)	Status of the land (with extent) applied for (a) Forest (b) Govt. Revenue (c) Patta	Form – I or Drawing branch note		
6	Whether the recommended applicant satisfies the provisions of Section 5(1) of the MMDR Act, 1957		Yes/No	
	i) Individual If yes, whether he is a Indian Citizen or If the applicant is a		N.A./Yes/No	

1	2	3	4	5
	ii) Partnership firm If yes, whether registered / unregistered and if all the partners are Indian citizens. or If the applicant is a **iii) Company** If yes, details of registration under section 3(1) of the Companies Act, 1956.		N.A./Yes/No N.A./Yes/No	
6(a)	Has the applicant informed about any change in his/her name, nationality or other particulars mentioned in the relevant forms.	Rules 62(1) of MCR, 1960/ Rules 61(1) of MOAHCEM Concession Rules, 2016	N.A./Yes/No	
6(b)	Whether the applicant has complied the following for his ML application on completion of PL operations	Rule 22(3)		
	Rule 22 (3) (i) (a)	Non refundable fee of ₹. 3,500/-	Yes/No	
	Rule 22 (3) (i) (d)	If applicant is an existing QL/ML holder No Due Certificate	N.A./Yes/No	
	Rule 22 (3) (i) (f)	Affidavit regarding I.T. returns	Yes/No	
	Rule 22 (3) (i) (g)	Affidavit regarding having/not having QL/ML in the State	N.A./Yes/No	
	Rule 22 (3) (i) (h)	Consent of owner if it is patta land	N.A./Yes/No	
6(c)	Has the application become invalid for any reason that is obvious on the face of record. If yes, furnish the details.		Yes/No	
6(d)	Total area held under RP/PL/ML (Excluding the instant proposal) in the State – Has he submitted an affidavit ? Details of lease wise extent (in Ha)	Rule 22(3) (i) (g)	Total extent – RP- PL- ML- Total extent-	
6(e)	From the information provided in 6(d) is the applicant having RP/PL/ML more than the limit prescribed under Section 6 of the Act.		Yes/No	
7	(i) Whether the approved area is reserved under Section 17A of the MMDR Act, 1957 (ii) Whether the recommendation is in favour of a Central/State Public Sector Undertaking ? (iii) Whether any proposal for reservation under Section 17/17A of the MMDR Act, 1957 on the recommended area is pending at : (a) Central Government (b) State Government If so, give details of the reserved area/reservation application in a separate sheet.	Sec 17/17A	Yes/No	
8	Whether provisions of Sec. 11 (of Act, before Amendment) has been violated. If so, details thereof.			

1	2	3	4	5
9	Whether the subject area falls in the Schedule area of the State.		Schedule/Non-Schedule Area	
	If so, whether the proposal is in compliance to relevant Central legislations, State laws/rules/regulations, Court orders including Samatha case etc.?		Yes/No	
10	Whether the area is compact and contiguous. If not, reasons for invoking the proviso to Section 6(1) (c) of the MMDR Act, 1957.		Yes/No	
11	Whether approved area (extent) satisfies the provisions of Rule 22D of MCR, 1960.		Yes/No	
12	Whether any Revision Application/Writ Petition is pending in respect of whole or part of this area.		Yes/No	
	If so, give details in a separate sheet.			
13	(i) Whether mineral concession is being recommended for captive use. If yes, then complete details.		Yes/No	
	Additional Checklist			
	NOC from the revenue department No. and date – ext. Restrictions if any.	Dept.		
14	Statutory clearances a) R & R Plan as per Hon'ble Supreme Court Order dated: 18.04.2013. b) Mining plan duly approved by IBM. No. and date c) Forest clearance d) Environmental clearance e) KSPCB clearance	Rule 22 BB Sec 2 of FC Act 1980 EP Act 1986 Air Act 1981 and Water Act 1974		
15	Whether any enquiry being conducted by a) Lokayukta b) SIT c) CBI If yes, give details....	 Yes/No Yes/No Yes/No		
16	Any adverse remarks found in Lokayukta/CEC/CBI/SIT reports. If yes, furnish details.	Yes/No		
17	Has the applicant been convicted for illegal mining by any Court			
18(a)	Whether any of the following render this approved area ineligible : a) Overlooking priority / prior applications and overlapping with any approved / granted / executed lease areas, b) Change in status of land of the approved area subsequently/withdrawal of statutory approvals etc., c) Suppression/concealing of facts if any, d) Illegal mining in the area / case booked / FIR lodged, e) Any other issues.	Yes/No		

1	2	3	4	5
18(b)	Whether there is any defect in the proposal sent for prior approval under Section 5(1) for grant of PL : eg., i) Where now it is detected that land is actually forest land. ii) Notified area, applications received, hearing was not completed but this application was sent for 5(1) approval and such approval was given. iii) Whether the very grant of 5(1) approval for PL is in doubt and needs revisiting. (Reasons to be furnished)			
19(a)	List down the conditions that have been imposed by the GOI while granting prior approval under section 5(1) for the PL Whether all these conditions have been met			
19(b)	List down all the conditions that have been imposed by the State Government while granting PL Whether all these conditions have been met			
20	Eligibility : Confirm eligibility of the application / applicant for grant of ML under the Act (a) Is an Indian National		Yes/No	
	(b) Section 5(1) has been compiled with			
	(c) PL was granted with previous approval of GOI			
	(d) Whether the condition that the applicant is an Indian National or all the members of the Firm or members of the Association are Indian National is compiled with			
	(e) Whether the condition that if the applicant is a company, the Company is Registered in India is met			
	(f) PL area has been prospected as per the Mineral (Evidence of Mineral Contents) Rules, 2015 under Rule 4(1) if that rule is applicable (cross refer from IBM report in part III A) OR			
	(g) PL area has been prospected as per the Mineral (Evidence of Mineral Contents) Rules, 2015 under Rule 4(2) if that rule is applicable in this case (cross refer from IBM report in Part IIIA)			
	(h) ML area is within the area limit as prescribed in the Act			
	(i) The applied area is contiguous			
21	Whether Section 10A(2)(b) is compiled with the following i.e.,			
	(i) has undertaken prospecting operations, to establish the existence of mineral contents in such land in accordance with such parameters as may be prescribed by the Central Government ; (cross refer from report of IBM) *(ii) has not committed any breach of the terms and conditions of the prospecting licence ;*			

1	2	3	4	5
	(iii) has not become ineligible under the provisions of this Act ; *and* *(iv) has applied for grant of mining lease, within a period of three months after the expiry of propecting license, or within such further period not exceeding six months as may have been extended by the State Government".*			
22	Opinion of the ML Section on whether applicant is eligible for grant of Mining Lease as per Section 10(A)(2)(b) of the MMDR Act, 1957.			

Case Worker **Superintendent**

MLS **MLS**

PART – II

Scrutiny at Drawing Branch

Sl. No.	Details	Provisions of Act and Rules	Response	Page No. in File
1	**2**	**3**	**4**	**5**
1	Verification of AML sketch Whether it is in conformity with the parameters prescribed in the application Form – I	Rule 22 Refer MOAHCEM Concession Rules, 2016 also		
2	Topo map verification / RTCs			
3	If considered under Section 11(2) whether this application is the only/first application over the area. Details of subsequent applications also to be furnished.			
4	Whether Notified area, (a) If yes, Notification No. and Date (b) Cut off date (c) Total No. of applications received (d) Whether relaxation obtained. If yes, furnish a copy of the order.	Rule 59(1) Also refer MOAHCEM Concession Rules, 2016	Yes/No	
5	Details of prior applications received if any over the applied area. Overlapping if any with the earlier granted/existing/5(1) approved cases. If found, furnish the details.	Rule 59(2) Also refer MOAHCEM Concession Rules, 2016	Yes/No	
6	Whether the applicant has submitted the co-ordinates of the applied sketch and is it free for grant ?		Yes/No	

JE/AE **Deputy Director**

(Drawing Branch)

PART – IIIA

Scrutiny at Technical Officer level at Indian Bureau of Mines with respect to grant of Mining Lease U/S 10(A) (2) (b) of the MMDR, Act.

Sl. No.	Details	Provisions of Act and Rules	Response	Page No.
1	2	3	4	5
1 (a)	Verification of PL reports Whether Prospecting operation has been carried out in accordance with scheme of prospecting under Rule 6 of MCDR, 1988			
1 (b)	Whether PL area has been prospected as per the Mineral (Evidence of Mineral Contents) Rules, 2015 under Rule 4(1) as applicable OR			
1 (c)	Whether PL area has been prospected as per the Mineral (Evidence of Mineral Contents) Rules, 2015 under Rule 4(2) as applicable			
2 (a)	Whether the PL has been carried out as per conditions imposed by Government of India (refer Guidelines issued on 24.06.2009)			
2 (b)	Whether the PL has been carried out as per conditions imposed by Government of India (refer Guidelines issued on 30.10.2014)			
3	Reporting of Mineral Resources have been done in accordance with Part – IV A or Part – IV B (as applicable) of the Minerals (Evidence of Mineral Contents) Rules, 2015 where Rule 4(1) of the Minerals (Evidence of the Mineral Contents) Rules, 2015 is applicable.			
4 (a)	Whether the PL has been carried out as per the additional conditions imposed by Government of India, if any.			
4 (b)	Whether the PL has been carried out as per the additional conditions imposed by State Government, if any.			
5	Whether intimation about the prospecting operations has been submitted by the PL holder as per Rule 7 of MCDR, 1988.			
6	Whether Report of prospecting operations has been submitted by the PL holder as under Rule 8 of MCDR, 1988			
7	Opinion of the IBM whether the applicant is ineligible for any reason for grant of ML (reason to be furnished) [in case IBM is of the view that applicant is ineligible for grant of ML)].			

Regional Controller of Mines, IBM

Or an Officer authorized by the

Regional Controller of Mines, IBM

PART – III B

Scrutiny at level of Technical Officers at Department of Mines and Geology with respect to grant of Mining Lease U/S 10(A)(2)(b) of the MMDR, Act.

(Scrutiny of prospecting Operations and Reports of Prospecting)

Sl. No.	Details	Provisions of Act and Rules	Response	Page No.
1	Whether Prospecting operation has been done as per the scheme of prospecting under the Mineral Conservation and Development Rules, 1988.			
2	Whether prospecting has been done by the following the Guidelines issued by GoI on 24.06.2009			
3	Whether prospecting has also been done by the following the Guidelines issued by GoI on 30.10.2014			
4 (a)	Whether the PL has been carried out as per the additional conditions imposed by the Government of India, if any.			
4 (b)	Whether the PL has been carried out as per the additional conditions imposed by the State Government, if any.			
5 6	Whether evidence to show the existence of mineral contents in the area for which application for ML has been made has been established as per Rule 4(1) or 4(2) of the Minerals (Evidence of Mineral Contents) Rules, 2015 whichever is applicable [Compliance with Section 10A(b)(2)(i)] Whether PL report has been submitted as per Part IVA or IVB (as applicable) of the schedule to the Minerals (Evidence of Mineral Contents) Rules, 2015 [In case Rule 4(1) of the Minerals (Evidence of Mineral Contents) Rules, 2015 is applicable]			
7	Whether the PL holder has submitted a report to the State Government, after completing prospecting operations in conformity with such Scheme of Prospecting and satisfying the conditions laid down in the guidelines for processing mineral concession proposals issued by the Government of India in the Ministry of Mines dated: 24.06.2009 and 30.10.2014 [In case where Rule 4(2) of the Minerals (Evidence of Mineral Contents) Rules, 2015 is applicable.			
8	Whether on scrutiny of Part – IIIA and based on inputs above in Part – IIIB, the applicant/application is eligible for grant of Mining Lease under Section 10A(2)(b)(i) and (ii) of the MMDR Act, 1957			

Geologist (P & M) **Sr. Geologist (MLS)**

PART – IV

Scrutiny by the Scrutiny Committee of Department of Mines and Geology with respect to grant of Mining Lease U/S 10(A)(2)(b) of the MMDR, Act.

Scrutiny of Part I, II, III A and III B by Scrutiny Committee

1	Whether the application is compliant with the provisions of Section 10 A (2) (b) (i) of MMDR Act, 1957		Yes/No
2	Whether the application has is compliant with the provisions of Section 10 A (2) (b) (ii) of MMDR Act, 1957		Yes/No

3	Whether the application is compliant with the provisions of Section 10 A (2) (b) (iii) of MMDR Act, 1957 If yes furnish details		Yes/No
4	Whether the application is compliant with compiled all the provisions of Section 10 A (2) (b) (iv) of MMDR Act, 1957		Yes/No
5	Has the application become invalid for any reason that is obvious on the face of record. If yes, furnish the details.		Yes/No
6	Whether on scrutiny of Part – I, II, IIIA and IIIB of the checklist and related documents in the file, the applicant / application is eligible for grant of Mining Lease under Section 10A(2)(b) of the MMDR Act, 1957.		Yes/No

Geologist (P & M) **Sr. Geologist (MLS) / Deputy Director (MLS)** **Sr.Geologist (P & M)**

PART – V

Remarks of the Appraisal Committee

1	Whether verification of the details furnished in Part I, II, IIIA, IIIB and IV of the checklist w/r to documents available in the file has been done by the Appraisal Committee.	Yes/No
2	Whether this case is eligible for grant of Mining Lease U/S 10(A) (2) (b) of the MMDR, Act.	

Sr. Geol (P & M) **Dy. Dir (R & D)** **Addl.Dir (Minls)**

Bengaluru

Date :

PART – VI

Opinion of the Commissioner, Department of Mines and Geology

Bengaluru

Date : **Commissioner**

PR – 392

SC - 200

ANVAR BHASHA

Under Secretary to Government

Commerce & Industries Department (Mines)

ಒಳಾಡಳಿತ ಸಚಿವಾಲಯ

ವಿಷಯ : ಹೆಚ್ಚುವರಿ ಸಿ.ಜೆ(ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸೋಮವಾರಪೇಟೆ ಈ ನ್ಯಾಯಾಲಯವನ್ನು ಕುಶಾಲನಗರಕ್ಕೆ ವರ್ಗಾಯಿಸಿರುವುದರಿಂದ ಸದರಿ ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಪೂರಕ ಸಿಬ್ಬಂದಿಯ ಹುದ್ದೆಗಳನ್ನು ಕುಶಾಲನಗರಕ್ಕೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಒಇ 55 ಪಿಪಿಇ 2012, ದಿನಾಂಕ:14.03.2012 ಮತ್ತು 19.04.2012.
2. ಸರ್ಕಾರದ ಅಧಿಸೂಚನೆ ಲಾ 202 ಎಲ್‌ಸಿಇ 2013, ದಿನಾಂಕ:21.07.2015.
3. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂಖ್ಯೆ:ಡಿಪಿಎನ್/ಸಿಶಾ–1/35/2015–16, ದಿನಾಂಕ:06.08.2015.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಹೆಚ್ಚುವರಿ ಸಿ.ಜೆ.(ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸೋಮವಾರಪೇಟೆ ಈ ನ್ಯಾಯಾಲಯ ಸೇರಿದಂತೆ 62 ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗಳನ್ನು ಹಾಗೂ ಪೂರಕ ಸಿಬ್ಬಂದಿಯನ್ನು ಸೃಜಿಸಲಾಗಿದೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರಲ್ಲಿ ಹೆಚ್ಚುವರಿ ಸಿ.ಜೆ.(ಕಿವಿ) ಮತ್ತು ಜೆಎಂಎಫ್‌ಸಿ ಸೋಮವಾರಪೇಟೆ ನ್ಯಾಯಾಲಯವನ್ನು Presiding Officer ಸೇರಿದಂತೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ (with existing staff strength) ಯೊಂದಿಗೆ ಕುಶಾಲನಗರಕ್ಕೆ ಸ್ಥಳಾಂತರಿಸಲು (To Shift) ಸರ್ಕಾರದ ಮಂಜೂರಾತಿಯನ್ನು ನೀಡಿದೆ.

ಮೇಲೆ ಓದಲಾದ ಕ್ರಮಸಂಖ್ಯೆ (3)ರಲ್ಲಿ ಹೆಚ್ಚುವರಿ ಸಿ.ಜೆ(ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯವನ್ನು ಕುಶಾಲನಗರಕ್ಕೆ ವರ್ಗಾಹಿಸಿರುವುದರಿಂದ ಸದರಿ ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಪೂರಕ ಸಿಬ್ಬಂದಿಯ ಹುದ್ದೆಗಳನ್ನು ಕುಶಾಲನಗರಕ್ಕೆ ವರ್ಗಾಯಿಸುವಂತೆ ಅಭಿಯೋಗ ನಿರ್ದೇಶಕರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಮಂಜೂರಾತಿ ನೀಡಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 461 ಪಿಪಿಇ 2015, ಬೆಂಗಳೂರು ದಿನಾಂಕ: 19 ನೇ ಮೇ 2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ:10.07.1996ರ ಐಟಂ ನಂ–53ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೆಚ್ಚುವರಿ ಸಿ.ಜೆ.(ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸೋಮವಾರಪೇಟೆ ಈ ನ್ಯಾಯಾಲಯವನ್ನು ಕುಶಾಲನಗರಕ್ಕೆ ವರ್ಗಾಯಿಸಿ ನ್ಯಾಯಾಲಯಕ್ಕೆ ಹೊಂದಿಕೊಂಡಂತೆ ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಪೂರಕ ಸಿಬ್ಬಂದಿಯ ಹುದ್ದೆಗಳನ್ನು ಕುಶಾಲನಗರಕ್ಕೆ ವರ್ಗಾಯಿಸಿ ಆದೇಶ ಹೊರಡಿಸಲಾಗಿದೆ.

PR. 378

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುಶೀಲ.ವಿ,
ಸರ್ಕಾರದ ಉಪ ಕಾರ್ಯದರ್ಶಿ, (ಪ್ರ)
ಒಳಾಡಳಿತ ಇಲಾಖೆ.(ಪೊಲೀಸು ಸೇವೆಗಳು–ಬಿ)

ನಗರಾಭಿವೃದ್ಧಿ ಸಚಿವಾಲಯ

ವಿಷಯ : ತಿಪಟೂರು ನಗರಕ್ಕೆ ಸುಧಾರಿತ ನೀರು ಸರಬರಾಜು ಯೋಜನೆಯ ಕಾಮಗಾರಿ ₹.127.91 ಕೋಟಿಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒಚ ಮಂಡಳಿ ರವರ ಪತ್ರ ಸಂಖ್ಯೆ:ಕಜಮಂ/ಮುಅ(ಬೆ)/ಉಮುಅ/ಸಅ–2/ತಿಪಟೂರು ನೀ.ಸ.ಯೋ/415/2015–16 ದಿನಾಂಕ 06–06–2015 ಮತ್ತು 02–11–2015.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 06–06–2015 ಮತ್ತು 02–11–2015 ರ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ತಿಪಟೂರು ನಗರವು ತಾಲ್ಲೂಕು ಕೇಂದ್ರವಾಗಿದ್ದು, ಬೆಂಗಳೂರಿನಿಂದ ಸುಮಾರು 141 ಕಿ.ಮೀ. ದೂರದಲ್ಲಿದೆ. ನಗರವು ತುಮಕೂರು ಜಿಲ್ಲೆಯ ಉಪವಿಭಾಗ ಕೇಂದ್ರವಾಗಿದ್ದು, ತುಮಕೂರಿನಿಂದ 75 ಕಿ.ಮೀ. ದೂರದಲ್ಲಿದೆ. ಬೆಂಗಳೂರು–ಮೀರಜ್ ಬ್ರಾಡ್‌ಗೇಜ್ ರೈಲ್ವೆ ಲೈನ್ ತಿಪಟೂರು ನಗರದ ಮೂಲಕ ಹಾದುಹೋಗುತ್ತದೆ. ತಿಪಟೂರು ನಗರದ ಜನಸಂಖ್ಯೆಯು 2011ರ ಜನಗಣತಿಯನ್ವಯ 59543 ಇದ್ದು. ಹಾಲಿ ಜನಸಂಖ್ಯೆ ಸುಮಾರು 66.109 ಇರುತ್ತದೆ.

ಮುಂದುವರೆದು **ಹಾಲಿ ನೀರು ಸರಬರಾಜು ವ್ಯವಸ್ಥೆ** ಈಚನೂರು ಕೆರೆ ಮೂಲದಿಂದ, ತಿಪಟೂರು ಹಾಗೂ ಅರಸೀಕೆರೆಗೆ ಸಂಯುಕ್ತ ನೀರು ಸರಬರಾಜು ಯೋಜನೆಯನ್ನು 1997 ರಲ್ಲಿ ಚಾಲನೆಗೊಳಿಸಲಾಗಿದೆ. ಸದರಿ ಯೋಜನೆಯಿಂದ ತಿಪಟೂರು ನಗರಕ್ಕೆ 9.1 ಎಂ.ಎಲ್.ಡಿ. ಹಾಗೂ ಅರಸೀಕೆರೆಗೆ 8.4 ಎಂ.ಎಲ್.ಡಿ.ಯಂತೆ ಒಟ್ಟು 17.50 ಎಂ.ಎಲ್.ಡಿ.ಗೆ ವಿನ್ಯಾಸಿಸಲಾಗಿದೆ. ಕೆರೆಯ ಒಟ್ಟು ಸಾಮರ್ಥ್ಯವು 2043 ಎಂ.ಎಲ್. ಗಳಾಗಿದ್ದು. ಇಂಗುವಿಕೆ ಮತ್ತು ಆವಿಯ ನಷ್ಟದ ನಂತರ ಕೆರೆಯ ನಿವ್ವಳ ಸಾಮರ್ಥ್ಯವು 1124 ಎಂ.ಎಲ್. ಗಳಾಗಿರುತ್ತದೆ. ಹಾಲಿ ಯೋಜನೆಯಲ್ಲಿ 60 ಹೆಚ್.ಪಿ. ಮತ್ತು 170 ಹೆಚ್.ಪಿ. ಸೆಂಟ್ರಿಫ್ಯೂಗಲ್ ಪಂಪ್‌ಸೆಟ್‌ಗಳ ಮೂಲಕ ಹೇಮಾವತಿ ನಾಲೆಯಿಂದ ಈಚನೂರು ಕೆರೆಗೆ ಮತ್ತು ಈಚನೂರು ಕೆರೆಯಿಂದ ಶುದ್ಧೀಕರಣ ಘಟಕಕ್ಕೆ 600 ಮಿ.ಮೀ. ವ್ಯಾಸದ 12 ಮತ್ತು 18 ಕೆ.ಎಸ್.ಸಿ. ಪಿ.ಎಸ್.ಸಿ ಏರು ಕೊಳವೆ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಈಚನೂರು ಕೆರೆಯಲ್ಲಿ ಇಂಗುವಿಕೆ ಮತ್ತು ಆವಿಯ ನಷ್ಟದ ನಂತರ ನಿವ್ವಳ ದೊರಕುವ ನೀರು 1124 ಎಂ.ಎಲ್.ಗಳಾಗಿರುತ್ತದೆ.

ಆದ್ದರಿಂದ, ತಿಪಟೂರು ನಗರದಿಂದ 12 ಕಿ.ಮೀ. ದೂರದಲ್ಲಿರುವ ಹಾಗೂ ಹೇಮಾವತಿ ನಾಲೆಯಿಂದ ಗುರುತ್ವಾಕರ್ಷಣೆಯಲ್ಲಿ ತುಂಬುವಂತಹ ನೊಣವಿನಕೆರೆ ಮೂಲದಿಂದ ಹೊಸ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಜಲ ಸಂಪನ್ಮೂಲ ಇಲಾಖೆಯು 0.30 ಟಿ.ಎಂ.ಸಿ.ಎಫ್.ಟಿ (8503 ಎಂ.ಎಲ್) ನೀರನ್ನು ನೊಣವಿನಕೆರೆಯಿಂದ ತಿಪಟೂರು ನೀರು ಸರಬರಾಜು ಯೋಜನೆಗೆ ಪಡೆಯಲು ಅನುಮತಿ ನೀಡಲಾಗಿದೆ. ನೊಣವಿನ ಕೆರೆಯ ಲೈವ್ ಶೇಖರಣೆ ಸಾಮರ್ಥ್ಯವು 296 ಎಂ.ಸಿ.ಎಫ್.ಟಿ (8377ಎಂ.ಎಲ್) ನೀರಾವರಿಗೆ ಉಪಯೋಗಿಸಲು 191.75 ಎಂ.ಸಿ.ಎಫ್.ಟಿ. (5427ಎಂಎಲ್) ಮತ್ತು ನಷ್ಟದ ನಂತರ ನೀರು ಸರಬರಾಜಿಗೆ ನಿವ್ವಳ ದೊರಕುವ ಸಾಮರ್ಥ್ಯವು 72.96 ಎಂ.ಸಿ.ಎಫ್.ಟಿ (2065 ಎಂ.ಎಲ್) ಆಗಿರುತ್ತದೆ. ಮಧ್ಯಂತರ ಅವಧಿಯ (2030) ಬೇಡಿಕೆಯನುಗುಣವಾಗಿ ನೊಣವಿನ ಕೆರೆಯ ಸಾಮರ್ಥ್ಯವನ್ನು ಹೆಚ್ಚಿಸಲು, ನೊಣವಿನ ಕೆರೆಯನ್ನು ಆಳಗೊಳಿಸಲು (deepening) ಯೋಜಿಸಲಾಗಿದೆ.

ತಿಪಟೂರು ನಗರಕ್ಕೆ ಸುಧಾರಿತ ನೀರು ಸರಬರಾಜು ಯೋಜನೆಯ ಅಂದಾಜನ್ನು ಮಂಡಳಿ. ಲೋಕೋಪಯೋಗಿ ಇಲಾಖೆ ಮತ್ತು BESCOM ರವರ 2014–15ನೇ ಸಾಲಿನ ದರಪಟ್ಟಿ ಹಾಗೂ ಮಾರುಕಟ್ಟೆ ದರವನ್ನಾಧರಿಸಿ ಅಂದಾಜನ್ನು ತಯಾರಿಸಲಾಗಿದ್ದು, ಸದರಿ ಯೋಜನೆಯನ್ನು ಈ ಕೆಳಕಂಡ

ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ವ್ಯವಸ್ಥಾಪಕ ನಿರ್ದೇಶಕರು ಶಿಫಾರಸ್ಸು ಮಾಡಿ, ಸದರಿ ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

1	ಕರ್ನಾಟಕ ಸರ್ಕಾರದ ಅನುದಾನ	60%	₹. 76.75 ಕೋಟಿಗಳು
2	ಹಣಕಾಸು ಸಂಸ್ಥೆಯಿಂದ ಸಾಲ	30%	₹. 38.37 ಕೋಟಿಗಳು
3	ಸ್ಥಳೀಯ ಸಂಸ್ಥೆಯ ಪಾಲು	10%	₹. 12.79 ಕೋಟಿಗಳು
		ಒಟ್ಟು	**₹. 127.91 ಕೋಟಿಗಳು**

ಸರ್ಕಾರವು ತಿಪಟೂರು ನಗರಕ್ಕೆ ಸುಧಾರಿತ ನೀರು ಸರಬರಾಜು ಯೋಜನೆಯ ಕಾಮಗಾರಿ ₹.127.91 ಕೋಟಿಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 32 ಯುಡಬ್ಲ್ಯೂಎಸ್ 2015, ಬೆಂಗಳೂರು, ದಿನಾಂಕ: 17-05-2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ತಿಪಟೂರು ನಗರಕ್ಕೆ ಸುಧಾರಿತ ನೀರು ಸರಬರಾಜು ಯೋಜನೆಯನ್ನು ಆದ್ಯತೀಕರಿಸಿ (prioritise) ಅನುಷ್ಠಾನಗೊಳಿಸಲು ಅಂದಾಜು ಮೊತ್ತ ₹. 127.91 ಕೋಟಿಗಳನ್ನು (ನೂರು ಇಪ್ಪತ್ತೇಳು ಕೋಟಿ ತೊಂಬತ್ತೊಂದು ಲಕ್ಷ ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಕೈಗೆತ್ತಿಕೊಳ್ಳಲು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1. ಈ ಯೋಜನೆಗೆ ತಗಲುವ ಯಾವುದೇ ಹೆಚ್ಚುವರಿ ಮೊತ್ತವನ್ನು ಸ್ಥಳೀಯ ಸಂಸ್ಥೆಯಿಂದಲೇ ಭರಿಸತಕ್ಕದ್ದು.
2. ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗಳನ್ನು ಕೆ.ಟಿ.ಪಿ.ಪಿ ಕಾಯ್ದೆ, 1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು 2000 ಹಾಗೂ E-Procurement portal ಮುಖಾಂತರ ಕೈಗೊಂಡ ಟೆಂಡರ್‌ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ನಂತರ ಮುಂದಿನ ಕ್ರಮ ವಹಿಸತಕ್ಕದ್ದು.
3. ಈ ಯೋಜನೆಗೆ ಸಂಬಂಧಪಟ್ಟಂತೆ ಯೋಜನೆ ಜಾರಿ ಇರುವ ಪೂರ್ಣಾವಧಿಯಲ್ಲಿ ಗುಣಮಟ್ಟ ಹಾಗೂ ಪ್ರಮಾಣಗಳ ತಪಾಸಣೆಗಾಗಿ Third Party Consultants ಅನ್ನು ನೇಮಿಸಿಕೊಳ್ಳುವುದು.
4. ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.

PR. 379

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ವೈ. ಗೋಪಾಲ್,
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),
ನಗರಾಭಿವೃದ್ಧಿ ಇಲಾಖೆ.(ಮಂಡಳಿ)

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಮಳವಳ್ಳಿ ಪಟ್ಟಣಕ್ಕೆ 2ನೇ ಹಂತದ ನೀರು ಸರಬರಾಜು ಸುಧಾರಣೆ ಯೋಜನೆಯನ್ನು ಅಂದಾಜು ₹.7020.00 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒಚ ಮಂಡಳಿ ರವರ ಪತ್ರ ಸಂಖ್ಯೆ:ಕಜಮಂ/ತಾಂತ್ರಿಕ/ಮುಅ(ಸಾ)/ ತಾಂಸ-5/ಸಅ-2/ಮಳವಳ್ಳಿ 2ನೇ ಹಂತ/64/14-15, ದಿನಾಂಕ 25-09-2014, 28-01-2015 & 08-06-2015.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 25-09-2014 ಮತ್ತು 28-01-2015 ರ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಮಳವಳ್ಳಿ ಪಟ್ಟಣವು ಮಂಡ್ಯ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, ಜಿಲ್ಲಾ ಕೇಂದ್ರ ಸ್ಥಾನದಿಂದ ಸುಮಾರು 35 ಕಿ.ಮೀ ದೂರದಲ್ಲಿರುತ್ತದೆ. 2011 ರ ಜನಗಣತಿಯಂತೆ ಪಟ್ಟಣದ ಜನ ಸಂಖ್ಯೆಯು 37527 ಇದ್ದು. 2031 ನೇ ಮಧ್ಯಂತರ ಇಸವಿ ಹಾಗೂ 2046 ನೇ ಅಂತ್ಯದ ಇಸವಿಗೆ ಅಂದಾಜಿಸಲಾದ ಜನಸಂಖ್ಯೆಯು ಕ್ರಮವಾಗಿ 46.700 ಮತ್ತು 53,000 ಇರುತ್ತದೆ. ಪಟ್ಟಣಕ್ಕೆ ಶಿಂಷಾ ಅಣೆಕಟ್ಟಿನ ಹತ್ತಿರ ಕಾವೇರಿ ನದಿಯಿಂದ ನೀರು ಸರಬರಾಜು ವ್ಯವಸ್ಥೆ ಹಾಲಿ ಇದ್ದು. ಸಧ್ಯಕ್ಕೆ ದಿನಂಪ್ರತಿ ತಲಾ 100 ಲೀಟರ್‌ನಂತೆ ನೀರು ಸರಬರಾಜು ಮಾಡಲಾಗುತ್ತಿದೆ. ಮಳವಳ್ಳಿ ಪಟ್ಟಣಕ್ಕೆ ನೀರು ಸರಬರಾಜು ಯೋಜನೆಯನ್ನು ₹. 400.00 ಲಕ್ಷಗಳಲ್ಲಿ ಈ ಹಿಂದೆ ಕೈಗೆತ್ತಿಕೊಳ್ಳಲಾಗಿತ್ತು. ಸದರಿ ಯೋಜನೆಯನ್ನು 2003 ರಲ್ಲಿ ಚಾಲನೆಗೊಳಿಸಿ, ಮುಂದಿನ ನಿರ್ವಹಣೆಗಾಗಿ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಲಾಗಿದೆ ಎಂದು ವರದಿ ಮಾಡಿರುತ್ತಾರೆ.

ಹಾಲಿ ನೀರು ಸರಬರಾಜು ವ್ಯವಸ್ಥೆಯಲ್ಲಿ ಅಳವಡಿಸಿರುವ ಪಿ.ಎಸ್.ಸಿ. ಕೊಳವೆ ಮಾರ್ಗವನ್ನು 1998-2000ರಲ್ಲಿ ಅಳವಡಿಸಲಾಗಿದ್ದು. ಆ ಸಮಯದಲ್ಲಿ ಕೊಳವೆ ಮಾರ್ಗವು ರಾಜ್ಯ ಹೆದ್ದಾರಿ 86 ರಿಂದ ಸಾಕಷ್ಟು ದೂರದಲ್ಲಿದ್ದು 2007 ರವರೆಗೆ ಯಾವುದೇ ತೊಂದರೆ ಇಲ್ಲದೆ ನೀರು ಸರಬರಾಜು ಮಾಡಲಾಗಿತ್ತು. ಆದರೆ 2006 ರಲ್ಲಿ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ 209 ಎಂದು ಮಾರ್ಪಡಿಸಿದ್ದರಿಂದ ಹಾಗೂ ರಸ್ತೆ ಅಗಲೀಕರಣಗೊಂಡಿದ್ದರಿಂದ ಕೊಳವೆ ಮಾರ್ಗದ ಕೆಲವು ಭಾಗಗಳು ರಸ್ತೆಯ ಮಧ್ಯೆ ಹಾಗೂ ರಸ್ತೆಯ ಪಕ್ಕದಲ್ಲಿರುತ್ತದೆ. ಈ ಕಾರಣದಿಂದ ಭಾರಿ ವಾಹನಗಳ ಅತಿಯಾದ ಓಡಾಟದಿಂದ ಪಿ.ಎಸ್.ಸಿ. ಕೊಳವೆ ಮಾರ್ಗವು ಅದುರಿ, ನೀರಿನ ಸೋರಿಕೆ ಉಂಟಾಗುತ್ತಿದೆ. ಹಾಲಿ ಅಳವಡಿಸಿರುವ ರೇಚಕಯಂತ್ರಗಳು 15 ವರ್ಷ ಹಳೆಯದಾಗಿದ್ದು, ಕಾರ್ಯಾವಧಿ ಮುಗಿದಿರುತ್ತದೆ ಇದರಿಂದ ಮಳವಳ್ಳಿ ಪಟ್ಟಣಕ್ಕೆ ನೀರು ಸರಬರಾಜಿನಲ್ಲಿ ಪದೇಪದೇ ನೀರಿನ ಅಡಚಣೆ ಉಂಟಾಗುತ್ತಿದೆ. ಹಾಲಿ ಇರುವ ಪಿ.ಎಸ್.ಸಿ ಕೊಳವೆ ಮಾರ್ಗದ ಬದಲಿಗೆ ಎಂ.ಎಸ್ ಕೊಳವೆಗಳನ್ನು ಅಳವಡಿಸಲು ರೇಚಕ ಯಂತ್ರಗಳನ್ನು ಅಳವಡಿಸಲು ಹಾಗೂ ಪಟ್ಟಣದಲ್ಲಿ ಸಮರ್ಪಕ ವಿತರಣಾ ವ್ಯವಸ್ಥೆ ಅಭಿವೃದ್ಧಿ ಪಡಿಸುವುದು ಅವಶ್ಯಕತೆ ಇರುತ್ತದೆ ಎಂದು ವರದಿ ಮಾಡಿರುತ್ತಾರೆ.

ಸದರಿ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಯೋಜನೆಯ ಅಂದಾಜು ಪಟ್ಟಿಯನ್ನು ಮಂಡಳಿಯ ಹಾಗೂ ಲೋಕೋಪಯೋಗಿ ಇಲಾಖೆಯ 2013–14ನೇ ಸಾಲಿನ ದರಪಟ್ಟಿಗಳನುಸಾರ ಶೇ.15% ETP Charges ಶೇ.10%, Contingency charges ಶೇ.1%, ಕಾರ್ಮಿಕರ ಕ್ಷೇಮಾಭಿವೃದ್ಧಿ ನಿಧಿ ವೆಚ್ಚ ಶೇ.1.5%. Third Party Inspection charges ಶೇ.5% ವರ್ಷಕ್ಕೆ (ಎರಡು ವರ್ಷಗಳಿಗೆ)ದರ ಹೊಂದಾಣಿಕೆ ವೆಚ್ಚ ಹಾಗೂ ಮೊದಲಾದವುಗಳನ್ನೊಳಗೊಂಡಂತೆ ಮಳವಳ್ಳಿ ಪಟ್ಟಣಕ್ಕೆ 2ನೇ ಹಂತದ ನೀರು ಸರಬರಾಜು ಸುಧಾರಣೆ ಯೋಜನೆಯನ್ನು ₹. 7020.00 ಲಕ್ಷಗಳ ಅಂದಾಜು ಪಟ್ಟಿಯ ಪ್ರಸ್ತಾವನೆಯನ್ನು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ವ್ಯವಸ್ಥಾಪಕ ನಿರ್ದೇಶಕರು ಶಿಫಾರಸ್ಸು ಮಾಡಿ, ಸದರಿ ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಕರ್ನಾಟಕ ಸರ್ಕಾರದ ಅನುದಾನ (75%)	₹. 5265.00 ಲಕ್ಷಗಳು
ಹಣಕಾಸು ಸಂಸ್ಥೆಗಳಿಂದ ಸಾಲ (20%)	₹. 1404.00 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಕೆ (05%)	₹. 351.00 ಲಕ್ಷಗಳು
ಒಟ್ಟು	**₹. 7020.00 ಲಕ್ಷಗಳು**

ಸರ್ಕಾರವು ಮಳವಳ್ಳಿ ಪಟ್ಟಣಕ್ಕೆ 2ನೇ ಹಂತದ ನೀರು ಸರಬರಾಜು ಸುಧಾರಣೆ ಯೋಜನೆಯನ್ನು ಅಂದಾಜು ₹. 7020.00 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 18 ಯುಡಬ್ಲ್ಯೂಎಸ್ 2014, ಬೆಂಗಳೂರು, ದಿನಾಂಕ: 17–05–2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಳವಳ್ಳಿ ಪಟ್ಟಣಕ್ಕೆ 2ನೇ ಹಂತದ ನೀರು ಸರಬರಾಜು ಸುಧಾರಣೆ ಯೋಜನೆಯನ್ನು ಆದ್ಯತೀಕರಿಸಿ (prioritise) ಅನುಷ್ಠಾನಗೊಳಿಸಲು ಅಂದಾಜು ಮೊತ್ತ ₹. 7020.00 ಲಕ್ಷಗಳನ್ನು (ಏಳು ಸಾವಿರದ ಇಪ್ಪತ್ತು ಲಕ್ಷಗಳು ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಕೈಗೆತ್ತಿಕೊಳ್ಳಲು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1. ಈ ಯೋಜನೆಗೆ ತಗಲುವ ಯಾವುದೇ ಹೆಚ್ಚುವರಿ ಮೊತ್ತವನ್ನು ಸ್ಥಳೀಯ ಸಂಸ್ಥೆಯಿಂದಲೇ ಭರಿಸತಕ್ಕದ್ದು.
2. ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆಗಳನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ಮತ್ತು ಕೆ.ಟಿ.ಪಿ.ಪಿ. ನಿಯಮಗಳು 2000 ಹಾಗೂ E-Procurement portal ಮುಖಾಂತರ ಕೈಗೊಂಡ ಟೆಂಡರ್‌ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ನಂತರ ಮುಂದಿನ ಕ್ರಮ ವಹಿಸತಕ್ಕದ್ದು.
3. ಈ ಯೋಜನೆಗೆ ಸಂಬಂಧಪಟ್ಟಂತೆ ಯೋಜನೆ ಜಾರಿ ಇರುವ ಪೂರ್ಣಾವಧಿಯಲ್ಲಿ ಗುಣಮಟ್ಟ ಹಾಗೂ ಪ್ರಮಾಣಗಳ ತಪಾಸಣೆಗಾಗಿ Third Party Consultants ಅನ್ನು ನೇಮಿಸಿಕೊಳ್ಳುವುದು.
4. ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯ ಒಳಗೆ ಪೂರ್ಣಗೊಳಿಸುವುದು.

PR. 380

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ವೈ. ಗೋಪಾಲ್,
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),
ನಗರಾಭಿವೃದ್ಧಿ ಇಲಾಖೆ.(ಮಂಡಳಿ)

ಕಂದಾಯ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಗ್ರಾಮದ ರಿ.ಸ.ನಂ. 38ಎ ರಲ್ಲಿ 3 ಎಕರೆ ಜಮೀನನ್ನು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪಿಸಲು ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ : ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಇವರ ಪತ್ರ ಸಂಖ್ಯೆ:ಕಂಶಾ/ಎಲ್‌ಜಿಎಲ್/ಸಿಆರ್–21/15–16, ದಿನಾಂಕ:02.11.2015 ಮತ್ತು 20.01.2016.

ಪ್ರಸ್ತಾವನೆ :

ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಭಾಷಣದಲ್ಲಿ ಪ್ರಸ್ತಾಪಿಸಿರುವಂತೆ ಚಿಕ್ಕೋಡಿಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪಿಸಲು ಸೂಕ್ತ ಜಮೀನು ಮಂಜೂರು ಮಾಡುವಂತೆ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜಾನ ಇಲಾಖೆ ಕಾರ್ಯದರ್ಶಿಗಳು ಕೋರಿದ್ದು, ಅದರಂತೆ ಮೇಲೆ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಇವರು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಗ್ರಾಮದ ರಿ.ಸ.ನಂ. 38ಎ ರಲ್ಲಿ 3 ಎಕರೆ ಜಮೀನನ್ನು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸ್ಥಾಪನೆಗೆ ಮಂಜೂರು ಮಾಡಲು ಸರ್ಕಾರದ ಪೂರ್ವಾನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2015–16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಬೆಳಗಾವಿ ಜಿಲ್ಲೆ, ಚಿಕ್ಕೋಡಿಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪಿಸಲು ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದ್ದು, ಈ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವು ಸಾಮಾನ್ಯ ಜನರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಯ ಬಗ್ಗೆ ಆಸಕ್ತಿ, ಕ್ರಿಯಾ ಶೀಲತೆ, ಕುತೂಹಲ ಹಾಗೂ ವೈಜ್ಞಾನಿಕತೆಯ ಬಗ್ಗೆ ಅರಿವು ಮೂಡಿಸಲು ಸ್ಫೂರ್ತಿದಾಯಕ ಕೇಂದ್ರವಾಗಿ ಹೊರಹೊಮ್ಮಲಿದೆ.

ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಇವರು ತಮ್ಮ ದಿ:20.01.2016ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಆದೇಶ ಸಂಖ್ಯೆ: ಎಲ್‌ಎನ್‌ಡಿ/ಸಿಆರ್/78–79, ದಿ:26.03.1980ರನ್ವಯ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಗ್ರಾಮದ ರಿ.ಸ.ನಂ38ಎ/4ರಲ್ಲಿ 15 ಎಕರೆ ಜಮೀನನ್ನು ಕಾರ್ಯನಿರ್ವಾಹಕ ಅಭಿಯಂತರರು ರಿಹ್ಯಾಬಲಿಟೇಶನ್ ಡಿವ್ಹಿಜನ್, ಹಿಡಕಲ್ ಇವರಿಗೆ ಇರಿಗೇಶನ್ ಡಿಪಾರ್ಟ್‌ಮೆಂಟ್ ಆಫೀಸ್ ಮತ್ತು ಸ್ಟಾಫ್ ಕ್ವಾಟರ್ಸ್

ನಿರ್ಮಾಣಕ್ಕಾಗಿ ಜಮೀನು ಮಂಜೂರಾತಿ ನೀಡಲಾಗಿರುತ್ತದೆ. ಆದರೆ ಜಮೀನು ಮಂಜೂರು ಮಾಡಿ ಸುಮಾರು 35 ವರ್ಷ ಕಳೆದು ಇಲ್ಲಿಯವರೆಗೆ ನಿಗಧಿತ ಉದ್ದೇಶಕ್ಕೆ ಬಳಸಿಕೊಳ್ಳದೇ ಇರುವುದರಿಂದ ಆದೇಶ ಸಂಖ್ಯೆ: ಕಂಶಾ/ಎಲ್‌ಜಿಎಲ್/ಸಿಆರ್/21/15-16, ದಿ.23.09.2015ರಂತೆ ಮಂಜೂರಾತಿ ಆದೇಶವನ್ನು ಹಿಂದಕ್ಕೆ ಪಡೆದು ಪಹಣಿ ಪತ್ರಿಕೆಯಲ್ಲಿ "ಕರ್ನಾಟಕ ಸರ್ಕಾರ" ಎಂದು ದಾಖಲು ಮಾಡಿರುವುದಾಗಿ ವರದಿ ಮಾಡಿರುತ್ತಾರೆ ಹಾಗೂ ಪ್ರಸ್ತಾಪಿತ ಜಮೀನು ಒತ್ತುವರಿ ಮುಕ್ತವಾಗಿರುತ್ತದೆ ಎಂದು ಉಪವಿಭಾಗಾಧಿಕಾರಿಗಳು ವರದಿಯನ್ನು ಸಲ್ಲಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ವಿಯಇ 75 ವಿತ್ರಮ 2015, ದಿ:21.07.2015ರನ್ವಯ 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು 4 ಕೋಟಿ ರೂಗಳ ಅಂದಾಜು ವೆಚ್ಚದಲ್ಲಿ ಕೆಸ್ಟೆಪ್‌ವತಿಯಿಂದ ಸ್ಥಾಪಿಸಲು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 83 ಎಲ್‌ಜಿಎಲ್ 2015 ಬೆಂಗಳೂರು, ದಿನಾಂಕ: 16.05.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ, ಚಿಕ್ಕೋಡಿ ಗ್ರಾಮದ ರಿ.ಸ.ನಂ.38ಎ ರಲ್ಲಿ 15-00ಎಕರೆ ಜಮೀನಿನ ಪೈಕಿ 3-00 ಎಕರೆ ಜಮೀನನ್ನು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಸ್ಥಾಪಿಸಲು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22ಎ(3)(i) ರನ್ವಯ ಉಚಿತವಾಗಿ ಮಂಜೂರು ಮಾಡಿ ಆದೇಶಿಸಿದೆ.

PR. 381

SC-25

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರೇವಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ.(ಭೂ ಮಂಜೂರಾತಿ-3)

ಕಂದಾಯ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ನವಿಲೆ ಗ್ರಾಮದ ಸ.ನಂ.72 ರಲ್ಲಿ 5-00 ಎಕರೆ ಸರ್ಕಾರಿ ಗೋಮಾಳ ಜಮೀನನ್ನು ವಸತಿಹೀನ 160 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಶಿವಮೊಗ್ಗ ಇವರಿಗೆ ಉಚಿತವಾಗಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ(1)ಸಿಆರ್-294/14-15 (6225), ದಿನಾಂಕ:31.03.2015.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ:31.03.2015 ರ ಪತ್ರದಲ್ಲಿ ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರು, ಶಿವಮೊಗ್ಗ ತಾಲ್ಲೂಕು, ನವಿಲೆ ಗ್ರಾಮದ ಸ.ನಂ.72 ರಲ್ಲಿ ಇರುವ 10-32 ಎಕರೆ/ಗುಂಟೆ ಸರ್ಕಾರಿ ಗೋಮಾಳ ಜಮೀನಿನ ಪೈಕಿ 5-00 ಎಕರೆ ಜಮೀನನ್ನು ವಸತಿಹೀನ 160 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ವಸತಿ ಉದ್ದೇಶಗಳಿಗಾಗಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಶಿವಮೊಗ್ಗ ವಿಭಾಗ ಇವರಿಗೆ ಮಂಜೂರು ಮಾಡುವ ಕುರಿತು ಪ್ರಸ್ತಾಪಿಸಿದ್ದಾರೆ.

ಮುಂದುವರೆದು, ಜಿಲ್ಲಾಧಿಕಾರಿಗಳು ವರದಿ ಮಾಡಿರುವಂತೆ, ಶಿವಮೊಗ್ಗ ತಾಲ್ಲೂಕು, ನವಿಲೆ ಗ್ರಾಮದ ಸ.ನಂ.72 ರಲ್ಲಿ ಇರುವ 10-32 ಎಕರೆ/ಗುಂಟೆ ವಿಸ್ತೀರ್ಣದ ಜಮೀನು ಪಹಣಿ ಪತ್ರಿಕೆ ಪ್ರಕಾರ 'ದನಗಳಿಗೆ ಮುಫತ್ತು' ಎಂದು ದಾಖಲಾಗಿರುತ್ತದೆ. ಈ ಜಮೀನಿಗೆ ಸಾಗುವಳಿ ಸಕ್ರಮೀಕರಣದಡಿ ನಮೂನೆ 50,53 ರಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಸಿ.ಡಿ.ಪಿ. ಪರಿಮಿತಿಯಲ್ಲಿ ಸದರಿ ಜಮೀನು ಬರುವುದರಿಂದ ಸಮಿತಿ ಮುಂದೆ ಮಂಡಿಸಿ ಅರ್ಜಿಗಳನ್ನು ವಜಾಗೊಳಿಸಲಾಗಿದೆ. ಪ್ರಸ್ತಾಪಿತ ನವಿಲೆ ಗ್ರಾಮದಲ್ಲಿ ಒಟ್ಟು 360 ಜಾನುವಾರುಗಳಿದ್ದು, ಉಳಿಕೆ ಜಮೀನು ಸಾಕಾಗುತ್ತಿದ್ದು, ಗ್ರಾಮಸ್ಥರ ಯಾವುದೇ ತಕರಾರು ಇರುವುದಿಲ್ಲವೆಂದು ವರದಿಯಲ್ಲಿ ತಿಳಿಸಲಾಗಿದೆ. ಸ್ಥಳ ತನಿಖಾ ವರದಿಯಲ್ಲಿ ಸದರಿ ಜಮೀನಿನ ಮೇಲೆ ಅಧಿಕ ಭಾರದ ವಿದ್ಯುತ್ ತಂತಿ ಹಾದು ಹೋಗಿರುವುದಿಲ್ಲವೆಂದು, ಅನಧಿಕೃತ ಕಟ್ಟಡಗಳು ಇರುವುದಿಲ್ಲವೆಂದು, ಸದರಿ ಜಮೀನಿಗೆ ಮುಖ್ಯ ರಸ್ತೆ ಸಂಪರ್ಕವಿರುವುದಾಗಿ ತಿಳಿಸಿರುತ್ತಾರೆ.

ಭೂನೀತಿಯನ್ನು ಆಧರಿಸಿ, ದಿನಾಂಕ:09-06-2015 ರಂದು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ಕ್ಕೆ ತಿದ್ದುಪಡಿ ತರಲಾಗಿದ್ದು, ನಿಯಮ 22ಎ ಅನ್ನು ಹೊಸದಾಗಿ ಸೇರ್ಪಡೆಗೊಳಿಸಲಾಗಿದೆ. ಸದರಿ ನಿಯಮ 22ಎ(3)(iii) ರ ಮೇರೆಗೆ ಪ್ರಸ್ತಾಪಿತ ಜಮೀನನ್ನು ವಸತಿ ಉದ್ದೇಶಗಳಿಗಾಗಿ ಉಚಿತವಾಗಿ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಪ್ರಸ್ತಾಪಿತ ಜಮೀನು 'ದನಗಳಿಗೆ ಮುಫತ್ತು' ಅಂದರೆ ಗೋಮಾಳ ಜಮೀನಾಗಿರುವುದರಿಂದ ಕರ್ನಾಟಕ ಭೂಕಂದಾಯ ನಿಯಮಗಳು, 1966ರ ನಿಯಮ 97(4)ರ ಮೇರೆಗೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ ಉಚಿತವಾಗಿ ಮಂಜೂರು ಮಾಡಲು ಪ್ರಸ್ತಾಪಿಸಲಾಗಿದೆ. ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 27 ಎಲ್‌ಜಿಎಸ್ 2015 ಬೆಂಗಳೂರು, ದಿನಾಂಕ: 11.05.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ನವಿಲೆ ಗ್ರಾಮದ ಸ.ನಂ.72 ರಲ್ಲಿ 5-00ಎಕರೆ ಸರ್ಕಾರಿ ಗೋಮಾಳ ಜಮೀನನ್ನು, ಕರ್ನಾಟಕ ಭೂಕಂದಾಯ ನಿಯಮಗಳು, 1966ರ ನಿಯಮ 97(4) ರನ್ವಯ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ವಸತಿಹೀನ 160 ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು, ಕರ್ನಾಟಕ ಭೂ ಕಂದಾಯ ನಿಯಮಗಳು, 1969ರ ನಿಯಮ 22ಎ(3)(iii)ರ ಅನ್ವಯ ಉಚಿತವಾಗಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಶಿವಮೊಗ್ಗ ಇವರಿಗೆ ಹಸ್ತಾಂತರಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

1. ಸದರಿ ಜಮೀನನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ, ಅದೇ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು,
2. ಮಂಜೂರಾದ ಜಮೀನಿನಲ್ಲಿ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು,

3. ಮಂಜೂರು ಮಾಡಲ್ಪಡುವ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ, ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.
4. ಮಂಜೂರಾದ ಜಮೀನು ಇಲಾಖೆಗೆ ಅವಶ್ಯವಿಲ್ಲವೆಂದು ಕಂಡುಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು.
5. ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಗಿಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು ಹಾಗೂ ನಿಯಮಾನುಸಾರ ಪಾವತಿಸಬೇಕಾದ ಎಲ್ಲಾ ರೀತಿಯ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.

PR. 382

SC-50

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎಲ್.ಮಹಾಂತೇಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ.(ಭೂಮಂಜೂರಾತಿ–1)

ಕಂದಾಯ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಕಸಬಾ ಹೋಬಳಿ, ಜಂಬಗಾರು ಗ್ರಾಮದ ಸ.ನಂ.15ಎ ರಲ್ಲಿ 15–00 ಎಕರೆ ವಿಸ್ತೀರ್ಣದ ಜಮೀನನ್ನು ಆಶ್ರಯ ನಿವೇಶನ ಮಂಜೂರಾತಿ ಉದ್ದೇಶಕ್ಕಾಗಿ ನಗರಸಭೆ, ಸಾಗರ ಇವರಿಗೆ ಉಚಿತವಾಗಿ ಮಂಜೂರು ಮಾಡುವ ಕುರಿತು.

ಓದಲಾಗಿದೆ : ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಲ್ಎನ್ಡಿ/ ಸಿಆರ್/167/2015–16, ದಿನಾಂಕ: 14.03.2016.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ:14.03.2016 ರ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರು ದಿನಾಂಕ:14.03.2016 ರಂದು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ, ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಕಸಬಾ ಹೋಬಳಿ, ಜಂಬಗಾರು ಗ್ರಾಮದ ಸ.ನಂ.15ಎ ರಲ್ಲಿ 15–00 ಎಕರೆ ವಿಸ್ತೀರ್ಣದ ಜಮೀನನ್ನು ಆಶ್ರಯ ನಿವೇಶನ ಮಂಜೂರಾತಿ ಉದ್ದೇಶಕ್ಕಾಗಿ ನಗರಸಭೆ, ಸಾಗರ ಇವರಿಗೆ ಉಚಿತವಾಗಿ ಕಾಯ್ದಿರಿಸುವ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಮುಂದುವರೆದು, ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರ ವರದಿಯಂತೆ, ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಕಸಬಾ ಹೋಬಳಿ, ಜಂಬಗಾರು ಗ್ರಾಮದ ಸ.ನಂ.15ಎ ರಲ್ಲಿನ ಜಮೀನು ಕಂದಾಯ ದಾಖಲಾತಿಯಂತೆ ದನಗಳಿಗೆ ಮುಫತ್ತು ಎಂಬುದಾಗಿ ವರ್ಗೀಕೃತಗೊಂಡಿರುತ್ತದೆ. ಈ ಸರ್ವೆ ನಂಬರ್‌ನಲ್ಲಿ ಒಟ್ಟು 187.10 ಎಕರೆ ಜಮೀನು ಇದ್ದು, ವಿವಿಧ ಯೋಜನೆಗಳಿಗೆ ಮಂಜೂರು ಮಾಡಿ ವಿಲೇಗೊಳಿಸಲಾಗಿದ್ದು ಆ ಪೈಕಿ ದನಗಳಿಗೆ ಮುಫತ್ತು ಪ್ರದೇಶದಲ್ಲಿ 15–00 ಎಕರೆ ಜಮೀನು ಗುರುತಿಸಿ ನಕ್ಷೆಯನ್ನು ತಯಾರಿಸಲಾಗಿದೆಯೆಂದು ತಿಳಿಸಿದ್ದಾರೆ. ಜಂಬಗಾರು ಗ್ರಾಮದಲ್ಲಿ 237 ಜಾನುವಾರುಗಳಿದ್ದು ಗ್ರಾಮದ ರಾಸುಗಳಿಗೆ ಮೇವಿನ ತೊಂದರೆಯಂಟಾಗುವುದಿಲ್ಲವೆಂದು ವರದಿಯಲ್ಲಿ ತಿಳಿಸಿದ್ದಾರೆ ಹಾಗೂ ಪ್ರಸ್ತಾಪಿತ ಪ್ರದೇಶವು ಸದ್ಯ ಖಿಲ್ಲಾ ಇದ್ದು, ನಮೂನೆ–50 ಮತ್ತು 53 ರಡಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಿರುವುದಿಲ್ಲವೆಂದು ತಿಳಿಸಿದ್ದಾರೆ. ಅಲ್ಲದೆ ದನಗಳಿಗೆ ಮುಫತ್ತು ಎಂದು ದಾಖಲಾದ ಜಮೀನಾದ ಗೋಮಾಳ ಗುಣಲಕ್ಷಣಗಳನ್ನು ಕಳೆದುಕೊಂಡಿದ್ದು, ಕರ್ನಾಟಕ ಭೂಕಂದಾಯ ನಿಯಮಗಳು, 1966 ನಿಯಮ 97(4)ರನ್ವಯ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಬಹುದಾಗಿದೆಯೆಂದು ಸಹ ತಿಳಿಸಿದ್ದಾರೆ.

ಮುಂದುವರೆದು, ಕಂದಾಯ ಅಧಿಕಾರಿಗಳು ನಡೆಸಿದ ಸ್ಥಳ ಪರಿಶೀಲನಾ ವರದಿಯಲ್ಲಿ ಪ್ರಸ್ತಾಪಿತ ಜಮೀನಿನಲ್ಲಿ ಬಿದುರು ಮರಗಳಿದ್ದು, ಯಾವುದೇ ಬೆಲೆ ಬಾಳುವ ಮರಗಳು ಇರುವುದಿಲ್ಲವೆಂದು ಹಾಗೂ ಸದರಿ ಜಮೀನಿನ ಮೇಲೆ ಅಧಿಕ ವಿದ್ಯುತ್ ತಂತಿಗಳು ಹಾದು ಹೋಗಿರುವುದಿಲ್ಲವೆಂದು, ಸದರಿ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಮಾರ್ಗ ಇರುವುದಾಗಿ ತಿಳಿಸಲಾಗಿದೆ. ಸದರಿ ಪ್ರದೇಶವು ಸಾಗರ ನಗರಸಭೆಯ ಸರಹದ್ದಿನೊಳಗೆ ಬರುತ್ತಿದ್ದು, ಸಮಗ್ರ ಪಟ್ಟಣಾಭಿವೃದ್ಧಿ ಯೋಜನೆ ವ್ಯಾಪ್ತಿಗೆ ಒಳಪಡುವ ಪ್ರದೇಶವಾಗಿದೆಯೆಂದು ತಿಳಿಸಲಾಗಿದೆ. ಅಲ್ಲದೆ, ನಗರಸಭೆ, ಸಾಗರ ಇವರಿಂದ ಜಂಬಗಾರು ಗ್ರಾಮದ ಸ.ನಂ.15ಎ ರಲ್ಲಿನ ಜಮೀನನ್ನು ನಿವೇಶನ ರಹಿತ ಬಡವರಿಗೆ ಉಚಿತವಾಗಿ ಆಶ್ರಯ ನಿವೇಶ ಹಂಚಿಕೆ ಮಾಡುವ ಕುರಿತು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಭೂನೀತಿಯನ್ನು ಆಧರಿಸಿ, ದಿನಾಂಕ:09–06–2015 ರಂದು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ಕ್ಕೆ ತಿದ್ದುಪಡಿ ತರಲಾಗಿದ್ದು, ಸದರಿ ನಿಯಮಗಳ ನಿಯಮ 22(3)(iii) ರಲ್ಲಿನ ಅವಕಾಶದಂತೆ, ಅಶ್ರಯ ನಿವೇಶನ ಉದ್ದೇಶಗಳಿಗಾಗಿ ಉಚಿತವಾಗಿ ಜಮೀನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಪ್ರಾದೇಶಿಕ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 34 ಎಲ್‌ಜಿಎಸ್ 2015 ಬೆಂಗಳೂರು, ದಿನಾಂಕ: 11.05.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಯಲ್ಲಿ, ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಕಸಬಾ ಹೋಬಳಿ, ಜಂಬಗಾರು ಗ್ರಾಮದ ಸ.ನಂ.15ಎ ರಲ್ಲಿ 15–00ಎಕರೆ ವಿಸ್ತೀರ್ಣದ ಸರ್ಕಾರಿ ಗೋಮಾಳ ಜಮೀನನ್ನು, ಕರ್ನಾಟಕ ಭೂಮಂಜೂರಾತಿ ನಿಯಮಗಳು, 1966ರ ನಿಯಮ 97(4) ರಡಿ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಆಶ್ರಯ ಯೋಜನೆಯಡಿ ನಿವೇಶನ ರಹಿತ ಬಡವರಿಗೆ ಉಚಿತವಾಗಿ ನಿವೇಶನ ಹಂಚಿಕೆ ಮಾಡುವ ಉದ್ದೇಶಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22(3)(iii) ರನ್ವಯ ಪೌರಾಯುಕ್ತರು, ನಗರ ಸಭೆ ಸಾಗರ ಶಿವಮೊಗ್ಗ ಜಿಲ್ಲೆ, ಇವರಿಗೆ ಹಸ್ತಾಂತರಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

1. ಸದರಿ ಜಮೀನನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ, ಅದೇ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು.
2. ಮಂಜೂರಾದ ಜಮೀನಿನಲ್ಲಿ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು.

3. ಮಂಜೂರು ಮಾಡಲ್ಪಡುವ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ, ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.
4. ಮಂಜೂರಾದ ಜಮೀನು ಇಲಾಖೆಗೆ ಅವಶ್ಯವಿಲ್ಲವೆಂದು ಕಂಡುಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು.
5. ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ದವಾಗಿ ಪಡೆಯಬೇಕಾದ ಪರವಾನಗಿಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು ಹಾಗೂ ನಿಯಮಾನುಸಾರ ಪಾವತಿಸಬೇಕಾದ ಎಲ್ಲಾ ರೀತಿಯ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.

PR. 383

SC-50

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎಲ್.ಮಹಾಂತೇಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ.(ಭೂ ಮಂಜೂರಾತಿ–1)

ಕಂದಾಯ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಕಸಬಾ ಹೋಬಳಿ, ಯಲಗಳಲೆ ಗ್ರಾಮದ ವಿವಿಧ ಸರ್ವೆ ನಂಬರುಗಳಲ್ಲಿ ಒಟ್ಟು 18–00 ಎಕರೆ ಜಮೀನನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಶಿವಮೊಗ್ಗ ಇವರಿಗೆ ಕೈಗಾರಿಕಾ ವಸಾಹತು ಸ್ಥಾಪಿಸುವ ಉದ್ದೇಶಕ್ಕೆ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂಖ್ಯೆ:ಎಲ್ಎನ್‌ಡಿ(2)ಎಸ್ಆರ್–11/14–15(4572/14–15) ದಿ: 14–05–2015.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರು ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಕಸಬಾ ಹೋಬಳಿ ಯಲಗಳಲೆ ಗ್ರಾಮದ ಸ.ನಂ.64 ರಲ್ಲಿ 12–32 ಎಕರೆ/ಗುಂಟೆ ಹಾಗೂ ಸ.ನಂ.65ರಲ್ಲಿ 5–08 ಎಕರೆ/ಗುಂಟೆ ಒಟ್ಟು 18–00 ಎಕರೆ ಜಮೀನನ್ನು ಕೈಗಾರಿಕಾ ವಸಾಹತು ಸ್ಥಾಪಿಸುವ ಉದ್ದೇಶಕ್ಕೆ ಮಂಜೂರು ಮಾಡುವ ಕುರಿತು ಪ್ರಸ್ತಾಪಿಸಿದ್ದಾರೆ.

ಮುಂದುವರೆದು, ಉಪವಿಭಾಗಾಧಿಕಾರಿ, ಸಾಗರ ಉಪ ವಿಭಾಗ, ಸಾಗರ ಇವರ ವರದಿಯಂತೆ ಪ್ರಸ್ತಾಪಿತ ಜಮೀನು ಈಗಾಗಲೇ ಮುಖ್ಯ ಅರಣ್ಯ ಅಧಿಕಾರಿಗಳು, ಮೈಸೂರು ಕಾಗದ ಕಾರ್ಖಾನೆ [ಎಂ.ಪಿ.ಎಂ] ಸಾಗರವರಿಗೆ 40 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿದ್ದು, ಯಲಗಳಲೆ ಗ್ರಾಮದ ಸ.ನಂ.64 ರಲ್ಲಿ 18–02 ಎಕರೆ/ಗುಂಟೆ ಮತ್ತು ಸ.ನಂ.65ರಲ್ಲಿ 20–06 ಎಕರೆ/ಗುಂಟೆ ಪ್ರದೇಶವು ಆರ್.ಟಿ.ಸಿ. ಪ್ರಕಾರ ಸರ್ಕಾರಿ ಬಂಜರು ಪ್ರದೇಶವಾಗಿರುತ್ತದೆ. ಈ ಪ್ರದೇಶದಲ್ಲಿ ಎಂ.ಪಿ.ಎಂ. ವತಿಯಿಂದ ನಡುತೋಪು ಬೆಳೆಸಲಾಗಿದೆ. ಇದರಲ್ಲಿ 18–00 ಎಕರೆ ಪ್ರದೇಶವು ಖಾಲಿಯಿರುತ್ತದೆ. ಸದರಿ ಪ್ರದೇಶವು ಡೀಮ್ಡ್ ಫಾರೆಸ್ಟ್ ಅಥವಾ ಮೀಸಲು ಅರಣ್ಯ ಪ್ರದೇಶಕ್ಕೆ ಒಳಪಟ್ಟಿರುವುದಿಲ್ಲ. ಖಾಲಿಯಿರುವ ಸದರಿ 18–00 ಎಕರೆ ಪ್ರದೇಶದಲ್ಲಿ ಸಣ್ಣ ಬಿದಿರು ಮೆಳೆಗಳು ಹಾಗೂ ಒಂದು ಪೈನಸ್ ಜಾತಿ ಮರ ಇರುತ್ತದೆ. ಈ ಖಾಲಿಯಿರುವ ಪ್ರದೇಶವನ್ನು ಕೈಗಾರಿಕಾ ವಸಾಹತು ಸ್ಥಾಪನೆಯ ಉದ್ದೇಶಕ್ಕೆ ವಾಪಸ್ಸು ನೀಡಲು ಅಭ್ಯಂತರವಿಲ್ಲವೆಂದು ಮುಖ್ಯ ಅರಣ್ಯ ಅಧಿಕಾರಿ, ಎಂ.ಪಿ.ಎಂ. ಸಾಗರ ವಿಭಾಗ, ಸಾಗರ ಇವರು ತಿಳಿಸಿರುತ್ತಾರೆ.

ಅದರಂತೆ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಶಿವಮೊಗ್ಗ ರವರು ಯಲಗಳಲೆ ಗ್ರಾಮದ ಸ.ನಂ.64 ಮತ್ತು 65 ರಲ್ಲಿ 18–00 ಎಕರೆ ಜಮೀನನ್ನು ಕೈಗಾರಿಕಾ ವಸಾಹತು ಸ್ಥಾಪನೆಗೆ ಸರ್ಕಾರಿ ಜಮೀನನ್ನು ಹಂಚಿಕೆ ಮಾಡುವಂತೆ ಕೋರಿರುತ್ತಾರೆ.

ಮುಂದುವರೆದು, ಯಲಗಳಲೆ ಗ್ರಾಮದಲ್ಲಿ ಒಟ್ಟು 466 ಜಾನುವಾರುಗಳಿದ್ದು, ಸದರಿ ಜಾನುವಾರುಗಳಿಗೆ ಅನುಗುಣವಾಗಿ ಒಟ್ಟು 470–01 ಎಕರೆ ಗೋಮಾಳ, ಇನ್ನಿತರೆ ಸರ್ಕಾರಿ ಭೂಮಿ 287–17 ಎಕರೆ ಇದ್ದು, ಈ ಸರ್ವೆ ನಂಬರ್‌ಗಳಿಗೆ ನಮೂನೆ 50, 53 ರಡಿ ಕ್ರಮವಾಗಿ 5 ಮತ್ತು 24 ಅರ್ಜಿಗಳು ದಾಖಲಾಗಿದ್ದು, ಪ್ರಸ್ತಾಪಿತ ಪ್ರದೇಶ ಸಾಗರ ನಗರಸಭೆ ಸರಹದ್ದಿನಿಂದ 3 ಕಿ.ಮೀ ಅಂತರದಲ್ಲಿರುವ ಕಾರಣ ಬಗರ್‌ಹುಕುಂದಾರರಿಗೆ ಮಂಜೂರಾತಿಗೆ ಅವಕಾಶವಿರುವುದಿಲ್ಲ ಹಾಗೂ ಕರ್ನಾಟಕ ಭೂಮಂಜೂರಾತಿ ನಿಯಮಗಳು, 1969ರ ನಿಯಮ 10(2)(iv)ರ ಪ್ರಕಾರ ನಗರ ಸಭೆಯ 3 ಕಿ.ಮೀ ವ್ಯಾಪ್ತಿಯೊಳಗೆ ಬರುವ ಜಮೀನನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಆದಾಗ್ಯೂ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಶಿವಮೊಗ್ಗ ಸಂಸ್ಥೆಯು ರಾಜ್ಯ ಸರ್ಕಾರದ ಉದ್ದಿಮೆಯಾಗಿದ್ದು, ಕೈಗಾರಿಕಾ ವಸಾಹತನ್ನು ಸ್ಥಾಪಿಸುವ ಉದ್ದೇಶವಿದ್ದು, ಅದರಿಂದಾಗಿ ಉದ್ಯೋಗ ಸೃಜನೆಯಾಗಲಿದ್ದು, ಸಾರ್ವಜನಿಕರಿಗೆ ಅನುಕೂಲವಾಗುತ್ತದೆ.

ಆದುದರಿಂದ ಪ್ರಸ್ತಾಪಿತ ಜಮೀನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಶಿವಮೊಗ್ಗ ಇವರಿಗೆ ಕೈಗಾರಿಕಾ ವಸಾಹತು ಸ್ಥಾಪಿಸುವ ಉದ್ದೇಶಕ್ಕೆ ಮಂಜೂರು ಮಾಡಲು ಪೂರಕವಾದ ಪ್ರದೇಶವಾಗಿರುವುದರಿಂದ, ಸದರಿ ನಿಯಮಗಳನ್ನು ಸಡಿಲಿಸಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 20(1)(ಸಿ) ರಲ್ಲಿ ಜಮೀನಿನ ಮಾರುಕಟ್ಟೆ ದರದ ಶೇಕಡ 50 ರಷ್ಟು ಮೊತ್ತವನ್ನು ಸರ್ಕಾರಕ್ಕೆ ಭರಿಸುವ ಷರತ್ತಿಗೊಳಪಟ್ಟು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಜಿಲ್ಲಾಧಿಕಾರಿರವರು ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 28 ಎಲ್‌ಜಿಎಸ್ 2015 ಬೆಂಗಳೂರು, ದಿನಾಂಕ: 10.03.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು, ಕಸಬಾ ಹೋಬಳಿ, ಯಲಗಳಲೆ ಗ್ರಾಮದ ಸನಂ.64ರಲ್ಲಿ 12–32 ಎಕರೆ/ಗುಂಟೆ ಹಾಗೂ ಸ.ನಂ.65ರಲ್ಲಿ 5–08 ಎಕರೆ/ಗುಂಟೆ ಒಟ್ಟು 18–00 ಎಕರೆ ಜಮೀನನ್ನು ಮೈಸೂರು ಕಾಗದ ಕಾರ್ಖಾನೆ ರವರಿಂದ ಹಿಂದಕ್ಕೆ ಪಡೆದು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಶಿವಮೊಗ್ಗ ಇವರಿಗೆ ಕೈಗಾರಿಕಾ ವಸಾಹತು ಸ್ಥಾಪಿಸುವ

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಉದ್ದೇಶಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 10(2)(iv) ಅನ್ನು ಸಡಿಲಿಸಿ ಹಾಗೂ ಸದರಿ ನಿಯಮಗಳ ನಿಯಮ 20(1)(ಸಿ)ರ ಅನ್ವಯ ಪ್ರಚಲಿತ ಮಾರುಕಟ್ಟೆ ದರದ ಶೇ.50 ರಷ್ಟು ದರ ವಿಧಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

1. ಸದರಿ ಜಮೀನನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ, ಅದೇ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು.
2. ಮಂಜೂರಾದ ಭೂಮಿಯನ್ನು ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ.
3. ಮಂಜೂರದ ಜಮೀನಿನಲ್ಲಿ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು.
4. ಮಂಜೂರು ಮಾಡಲ್ಪಡುವ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ, ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.
5. ಮಂಜೂರಾದ ಜಮೀನಿನ ಯಾವುದೇ ಭಾಗವು ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಾಗಿದ್ದಲ್ಲಿ, ಸರ್ಕಾರವು ಸದರಿ ಜಮೀನನ್ನು ಪರಿಹಾರ ನೀಡದೇ ಹಿಂತೆಗೆದುಕೊಳ್ಳುವ ಹಕ್ಕನ್ನು ಹೊಂದಿರುತ್ತದೆ.
6. ಮಂಜೂರಾದ ಜಮೀನು ಇಲಾಖೆಗೆ ಅವಶ್ಯವಿಲ್ಲವೆಂದು ಕಂಡುಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು.
7. ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಗಿಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು ಹಾಗೂ ನಿಯಮಾನುಸಾರ ಪಾವತಿಸಬೇಕಾದ ಎಲ್ಲಾ ರೀತಿಯ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.

PR. 384

SC-50

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎಲ್.ಮಹಾಂತೇಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ.(ಭೂಮಂಜೂರಾತಿ–1)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59